ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

KB 12 YEARS 2013

# ಕನ್ನಡ ಭಾರತಿ

ನೊಂದವರ ನೈಜ ಕನ್ನಡ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ಸಂಪುಟ : 13 ಸಂಚಿಕೆ : 112

9–10–2025 ಗುರುವಾರ

₹1 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 13 ISSUE : 112

## ಸಂಪಾದಕೀಯ.....

### ಜಾತಿ ಸಂಕರ ಸುಳಿಗೆ ಸಿಲುಕಿ ಬಲಿಯಾದ ಪ್ರಾಮಾಣಿಕ ಅಧಿಕಾರಿ ಪೂರಣ್‌ಕುಮಾರ್



ಹರಿಯಾಣ ಕೇಡರ್‌ನ ಹಿರಿಯ ಐಪಿಎಸ್ ಅಧಿಕಾರಿ ವೈ. ಪೂರಣ್ ಕುಮಾರ್ ಅವರ ಮರಣವು ಕೇವಲ ವೈಯಕ್ತಿಕ ದುರಂತವಲ್ಲ. ಅದು ಭಾರತದ ಆಡಳಿತ ವ್ಯವಸ್ಥೆಯ ಒಳಗಿನ ಅಸಮತೆ, ಜಾತಿ ಪೂರ್ವಾಗ್ರಹ ಮತ್ತು ಶಿಸ್ತು ಎಂಬ ಹೆಸರಿನಲ್ಲಿ ನಡೆಯುವ ಅನ್ಯಾಯಗಳತ್ತ ಬೆರಳು ತೋರಿಸುತ್ತಿದೆ.

ಸಂವಿಧಾನ ಕಾನೂನುಗಳು ಜಾರಿಯಾಗದೆ ಸ್ವತಃ ಒಬ್ಬ ಹಿರಿಯ ಐಪಿಎಸ್ ಅಧಿಕಾರಿ ಹತಾಶಗೊಂಡ ಪೂರಣ್‌ಕುಮಾರ್ ಚಂಡೀಗಡದ ತಮ್ಮ ನಿವಾಸದಲ್ಲಿ ಗುಂಡಿಕ್ಕಿಕೊಂಡು ಹೆಣವಾಗಿದ್ದರೆ. ಸಂವಿಧಾನದ ಆಶಯಗಳನ್ನು ಬಲಿಷ್ಟರು, ರಾಜಕಾರಣಿಗಳು ತಮಗಿಷ್ಟ ಬಂದಂತೆ ಕಾನೂನು ಬಳಸಿಕೊಂಡು ದರ್ಪ ಮರೆಯುವುದನ್ನು ಒಬ್ಬ ಐಪಿಎಸ್ ಅಧಿಕಾರಿ ಕೈಯಲ್ಲಿಯೇ ತಡೆಯಲಾಗದ ಅಧಃಪತನ ಇದು ಎತ್ತಿ ತೋರಿಸುತ್ತಿದೆ.

2001ರ ಬ್ಯಾಚ್‌ನ ಈ ಅಧಿಕಾರಿ ಕಾನೂನು ಬದ್ಧತೆಯ ದೃಢ ನಿಲುವಿಗೆ ಹೆಸರುವಾಸಿಯಾಗಿದ್ದರು. ಅಂಬಾಲಾ, ಕುರುಕ್ಷೇತ್ರ ರೋಹ್ಟಕ್ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದ ಅವರು ಯಾವುದೇ ಕಾನೂನು ಪಾಲನೆಯಿಂದ ಹಿಂದೆ ಸರಿಯಲಿಲ್ಲ. ಅಧಿಕಾರಿಗಳ ಹಕ್ಕುಗಳು, ಪಾರದರ್ಶಕ ಆಡಳಿತ ಹಾಗೂ ಪೊಲೀಸ್ ಇಲಾಖೆಯೊಳಗಿನ ಅನ್ಯಾಯದ ವಿರುದ್ಧ ಅವರು ನೇರ ಧ್ವನಿ ಎತ್ತಿದವರು. ಅವರ ಅಭಿಪ್ರಾಯಗಳು ಕೇವಲ ವೈಯಕ್ತಿಕ ಅಸಮಾಧಾನದ ಪ್ರತಿಬಿಂಬವಾಗಿರಲಿಲ್ಲ, ವ್ಯವಸ್ಥೆಯೊಳಗಿನ ವಾಸ್ತವ ಅಸಮತೆಯನ್ನು ಬಯಲಿಗೆಳೆದವು.

ಕಳೆದ ವರ್ಷ ಅವರು ಹಿರಿಯ ಅಧಿಕಾರಿಗಳಿಗೆ ವಾಹನ ಹಂಚಿಕೆ ತಾರತಮ್ಯ ವಿರೋಧಿಸಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ನಿಯಮ ಮೀರಿ ಬಡ್ತಿ ನೀಡಿರುವ ವಿರುದ್ಧವೂ ಆಕ್ಷೇಪಿಸಿದ್ದರು. ಈ ಎಲ್ಲವು ಕೇವಲ ಆಡಳಿತಾತ್ಮಕ ತರ್ಕದ ವಿಷಯವಾಗಿರಲಿಲ್ಲ, ಅದು ವ್ಯವಸ್ಥೆಯೊಳಗಿನ ವರ್ಗೀಯ, ಜಾತಿ ಆಧಾರಿತ ವ್ಯತ್ಯಾಸದ ಪ್ರತಿಫಲನವಾಗಿತ್ತು.

ಪೂರಣ್ ಕುಮಾರ್ ತಮ್ಮ ಪತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದ ಮಾತುಗಳು ಆಘಾತಕರವಾಗಿವೆ. ಅವರು ಹಾಗೂ ಅವರ ಬ್ಯಾಚ್‌ನವರು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರಾಗಿರುವುದರಿಂದಲೇ ತಮ್ಮ ಪ್ರಗತಿಗೆ ಅಡ್ಡಿ ಬಂತು ಎಂಬುದು ಅವರ ಆರೋಪ. ಕೆಲವೊಂದು ಐಪಿಎಸ್ ಬ್ಯಾಚ್‌ಗಳ ವೇತನ ಪರಿಷ್ಕರಣೆ, ಹುದ್ದೆ ಹಂಚಿಕೆ ಎಲ್ಲವೂ ನಿಯಮ ಮೀರಿ ನಡೆದಿದ್ದು, ತಮ್ಮ ಅರ್ಜಿಗಳನ್ನು ಕಾನೂನು ಇಲಾಖೆಗೆ "ಅಗತ್ಯವಿಲ್ಲದ" ರೀತಿಯಲ್ಲಿ ಕಳುಹಿಸಿ ವಿಳಂಬ ಮಾಡಲಾಗುತ್ತಿದೆ ಎಂದು ಅವರು ಬರೆದಿದ್ದರು. ಈ ಆರೋಪಗಳು ಕೇವಲ ಅವರಿಗಷ್ಟೇ ಅಲ್ಲ, ಇಡೀ ಆಡಳಿತ ವ್ಯವಸ್ಥೆಗೆ ಕನ್ನಡಿ ಹಿಡಿಯುವಂತಹವು.

2023ರಲ್ಲಿ ಅವರನ್ನು "ಐಜಿಪಿ (ಹೋಮ್ ಗಾರ್ಡ್ಸ್)" ಹುದ್ದೆಗೆ ಕಳುಹಿಸಲಾಗಿತ್ತು. ಆದರೆ ಅವರು ಅದೇ ಹುದ್ದೆಯು ರಾಜ್ಯದ ಕೇಡರ್ ಪಟ್ಟಿಯಲ್ಲಿಲ್ಲವೆಂದು ಅಧಿಕೃತ ದಾಖಲೆಗಳೊಂದಿಗೆ ಸರ್ಕಾರಕ್ಕೆ ತೋರಿಸಿದರು. ಅಂದರೆ, ಕಾನೂನುಬದ್ಧ ಸ್ಥಾನವಲ್ಲದ ಹುದ್ದೆಗೆ ನಿಯೋಜಿಸಿ ಅವಮಾನ ಮಾಡಲು ಪ್ರಯತ್ನಿಸಲಾಗಿದೆ ಎಂಬುದು ಅವರ ಮಾತು. ಇದೇ ಸಂದರ್ಭದಲ್ಲಿ ಅವರು "ಅಧಿಕಾರಿಗಳ ಹಕ್ಕುಗಳ ಪ್ರಶ್ನೆ ಕೇವಲ ಹುದ್ದೆಗಳ ವಿಷಯವಲ್ಲ, ಅದು ಗೌರವ ಮತ್ತು ಸಮಾನತೆಯ ಪ್ರಶ್ನೆ" ಎಂದು ಸ್ಪಷ್ಟಪಡಿಸಿದ್ದರು.

ಪೂರಣ್ ಕುಮಾರ್ ಅವರಂತಹ ಅಧಿಕಾರಿಗಳು ಅಪರೂಪ. ಅವರು ದೇವಾಲಯದ ಅಕ್ರಮ ನಿರ್ಮಾಣವಿರಲಿ, ಅಧಿಕೃತ ವಾಹನ ಹಂಚಿಕೆಯ ಭ್ರಷ್ಟಕ್ರಮವಿರಲಿ ಯಾವುದರಲ್ಲಿಯೂ ಮೌನ ವಹಿಸಲಿಲ್ಲ. ಆದರೆ, ಇದೇ ನೇರತೆ ಕೆಲವರಿಗೆ ಅಸಹ್ಯವಾದಂತೆ ಕಾಣುತ್ತದೆ. "ಆಜ್ಞೆಯ ಪಾಲನೆಗೆ" ಹೆಚ್ಚು ಪ್ರಾಮುಖ್ಯತೆ ನೀಡುವ ವ್ಯವಸ್ಥೆಯಲ್ಲಿ "ಸತ್ಯ ಹೇಳುವ ಧೈರ್ಯ" ಅಪರಾಧದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಅವರ ಸಾವಿನ ಹಿನ್ನೆಲೆ ಕೇವಲ ತನಿಖೆಯ ವಿಷಯವಲ್ಲ, ಅದು ವ್ಯವಸ್ಥೆಯ ನೈತಿಕ ಪರೀಕ್ಷೆ. ಕಳೆದ ಎರಡು ವರ್ಷಗಳಲ್ಲಿ ಅವರು ನೀಡಿದ ದೂರುಗಳು, ಪತ್ರಗಳು ಹಾಗೂ ಕೋರಿಕೆಗಳು ಸರ್ಕಾರದ ಟೇಬಲ್‌ಗಳ ಮೇಲೆ ಬಿದ್ದಿದ್ದರೂ, ಅವುಗಳಿಗೆ ಯಾವ ರೀತಿಯ ಗಂಭೀರ ಕ್ರಮ ತೆಗೆದುಕೊಳ್ಳಲಾಯಿತು ಎಂಬುದು ಪ್ರಶ್ನೆ. ಸರ್ಕಾರವು ತಮ್ಮದೇ ಅಧಿಕಾರಿಯ ಅಹವಾಲನ್ನು ಕೇಳಲಿಲ್ಲವೇ? ಅವರ ಮೇಲಿನ ಹಿಂಸೆ ಹಾಗೂ ಅವಮಾನ ಆರೋಪಗಳ ಕುರಿತು ಸ್ವತಂತ್ರ ತನಿಖೆ ಏಕೆ ಆಗಲಿಲ್ಲ?

ಭಾರತದ ಆಡಳಿತ ವ್ಯವಸ್ಥೆ – ವಿಶೇಷವಾಗಿ ಐಎಎಸ್, ಐಪಿಎಸ್ ಸೇವೆಗಳು – ಪ್ರಜಾಸತ್ತಾತ್ಮಕ ಮೌಲ್ಯಗಳ ಕಾವಲುಗಾರರೆಂದು ಹೇಳಿಕೊಳ್ಳುತ್ತವೆ. ಆದರೆ ಪೂರಣ್ ಕುಮಾರ್ ಅವರ ಪ್ರಕರಣವು ಈ ಘೋಷಣೆಗಳೊಳಗಿನ ಖಾಲಿತನವನ್ನು ಬಯಲಿಗೆಳೆಯುತ್ತದೆ. ಜಾತಿ, ಹುದ್ದೆ ಮತ್ತು ಪ್ರಭಾವ ಇನ್ನೂ ನ್ಯಾಯಕ್ಕಿಂತ ಶಕ್ತಿಯಾಗಿರುವ ಸ್ಥಿತಿಯಲ್ಲಿ ನಾವಿದ್ದೇವೆ.


ಇದೀಗ ಸರ್ಕಾರ ಮತ್ತು ಕೇಂದ್ರ ಗೃಹಮಂತ್ರಾಲಯದ ಹೊಣೆಗಾರಿಕೆ ಕೇವಲ ಅವರ ಸಾವಿನ ತನಿಖೆ ನಡೆಸುವುದಲ್ಲ. ಪೂರಣ್ ಕುಮಾರ್ ಎತ್ತಿದ ಪ್ರತಿಯೊಂದು ಪ್ರಶ್ನೆಯಿಗೂ ಉತ್ತರ ನೀಡುವುದು, ಅವರ ವಿರುದ್ಧ ನಡೆದ ಕ್ರಮಗಳ ಪರಿಶೀಲನೆ ನಡೆಸುವುದು ಮತ್ತು ಅಧಿಕಾರಿಗಳೊಳಗಿನ ಸಮಾನತೆಯ ಭರವಸೆ ನೀಡುವುದೇ ನಿಜವಾದ ಗೌರವ. ಪಾರದರ್ಶಕ, ನಿಷ್ಪಕ್ಷಪಾತ ಹಾಗೂ ವೇಗವಾದ ತನಿಖೆಯಿಲ್ಲದೆ ಈ ಪ್ರಕರಣ ಕೇವಲ ಮತ್ತೊಂದು ಮೌನದ ಕಥೆಯಾಗಿ ಉಳಿಯುತ್ತದೆ.

ವ್ಯವಸ್ಥೆಯೊಳಗೆ ನಿಷ್ಠೆಯಿಂದ ಮಾತನಾಡುವುದು ಹೇಗೆ ಅಪಾಯದ ಕೆಲಸವಾಗಬಹುದು ಎಂಬುದನ್ನು ಪೂರಣ್ ಕುಮಾರ್ ಅವರ ಸಾವು ತೋರಿಸಿದೆ. ಆದರೆ ಅವರ ಮರಣವು ಒಂದು ಸತ್ಯವನ್ನು ನೆನಪಿಸುತ್ತದೆ, ಸತ್ಯವನ್ನು ಮೌನಗೊಳಿಸಬಹುದು, ಆದರೆ ಅದನ್ನು ಅಳಿಸಿಹಾಕಲು ಸಾಧ್ಯವಿಲ್ಲ.

**–ಮಲ್ಲಿಕಾರ್ಜುನ್ ಕಬ್ಬೂರು,**
ಸಂಪಾದಕರು.

## ಸಾಕಿದ ಹಸು ತಿಂದಿದೆ ಎಂದು ಹುಲಿಗಳಿಗೆ ವಿಷ ಹಾಕಿದರೆ ಸಹಿಸಲ್ಲ

# ಪ್ರಾಣಿ ಸಂಪತ್ತು ಕೊಲ್ಲುವವರ ವಿರುದ್ಧ ಕಠಿಣ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ



**ಬೆಂಗಳೂರು:** ಸಾಕಿದ ಹಸುವನ್ನು ಹುಲಿ ತಿಂದಿದೆ ಎನ್ನುವ ಕಾರಣಕ್ಕೆ ಹುಲಿಗಳಿಗೆ ವಿಷ ಹಾಕುವುದನ್ನು ಸಹಿಸಲು ಸಾಧ್ಯವಿಲ್ಲ. ಯಾರೇ ಅರಣ್ಯ ಮತ್ತು ಪ್ರಾಣಿ ಸಂಪತ್ತನ್ನು ಕೊಲ್ಲಲು ಮುಂದಾದರೆ ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಹೇಳಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ 71ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಪರಿಸರ, ಅರಣ್ಯ ಸಂರಕ್ಷಕರಿಗೆ ಮುಖ್ಯಮಂತ್ರಿಗಳ ಪದಕ ವಿತರಿಸಿ ಮಾತನಾಡಿದ ಅವರು, ಪ್ರಾಣಿ ಸಂಪತ್ತು ಇಲ್ಲದೆ ಅರಣ್ಯ ಸಂಪತ್ತಿಗೆ ಮೌಲ್ಯವೇ ಇಲ್ಲ. ಹೀಗಾಗಿ ಪ್ರಾಣಿ ಸಂಪತ್ತನ್ನು ಕೊಲ್ಲುವವರ ವಿರುದ್ಧ ಕಠಿಣ ಕ್ರಮ ಶತಸಿದ್ಧ ಎಂದು ಹೇಳಿದರು. ಸಾಕಿದ ಹಸುವನ್ನು ಹುಲಿ ತಿಂದಿದೆ ಎನ್ನುವ ಕಾರಣಕ್ಕೆ ಹುಲಿಗಳಿಗೆ ವಿಷ ಹಾಕುವುದನ್ನು ಸಹಿಸಲು ಸಾಧ್ಯವಿಲ್ಲ. ಯಾರೇ ಅರಣ್ಯ ಮತ್ತು ಪ್ರಾಣಿ ಸಂಪತ್ತನ್ನು ಕೊಲ್ಲಲು ಮುಂದಾದರೆ ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅವರು ಎಷ್ಟೇ ದೊಡ್ಡವರಾಗಿದ್ದರೂ ಮುಲಾಜು ನೋಡದೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಮಾನವ–ವನ್ಯಜೀವಿ ಸಹಬಾಳ್ವೆಯ ಪರಿಸರ ಪೂರಕವಾದ ಆಶಯಕ್ಕಾಗಿ ವನ್ಯಜೀವಿ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಅರಣ್ಯ ಪರಿಸರ ಆರೋಗ್ಯಕರವಾಗಿ ವಿಸ್ತರಣೆ ಆದಷ್ಟೂ ಮನುಷ್ಯ ಪರಿಸರ ಹೆಚ್ಚು ಆರೋಗ್ಯಕರವಾಗಿರುತ್ತದೆ. ಅರಣ್ಯದ ಉಳಿವು ಭೂಮಿಯ ಉಳಿವು ಎನ್ನುವುದನ್ನು ಮರೆಯಬಾರದು.

ಆನೆ ಮತ್ತು ಹುಲಿ ಸಂಪತ್ತಿನಲ್ಲಿ ನಮ್ಮ ರಾಜ್ಯ ಮೊದಲ ಮತ್ತು ಎರಡನೇ ಸ್ಥಾನದಲ್ಲಿದೆ. ಇದರ ಜೊತೆಗೆ ಪ್ರಾಣಿ ಮತ್ತು ಮನುಷ್ಯರ ಸಂಘರ್ಷ ತಪ್ಪಿ ಸಹಬಾಳ್ವೆ ಏರ್ಪಡಬೇಕು. ಇದಕ್ಕಾಗಿ ಪ್ರಾಣಿಗಳು ಕಾಡು ಬಿಟ್ಟು ಹೊರಗೆ ಏಕೆ ಬರುತ್ತಿವೆ ಎನ್ನುವ ಬಗ್ಗೆ ಅಧ್ಯಯನಗಳು ನಡೆದು ವೈಜ್ಞಾನಿಕ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ.

ಹುಲಿ, ಆನೆಗಳ ಹತ್ಯೆ ಅತ್ಯಂತ ಗಂಭೀರ ಅಪರಾಧಗಳು. ಅರಣ್ಯಾಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು. ಹುಲಿ ಹತ್ಯೆ ಮಾಡಿದವರು ಮತ್ತು ಪ್ರಾಣಿ ಸಂಪತ್ತನ್ನು ಕೊಲ್ಲುವವರ ವಿರುದ್ಧ ಕಠಿಣ ಕ್ರಮ ಶತಸಿದ್ಧ. ದಿನೇ ದಿನೇ ಅರಣ್ಯ ಪ್ರದೇಶ ಕಡಿಮೆ ಆಗುತ್ತಿದ್ದರೆ ಮನುಷ್ಯ ಕುಲ ಉಳಿಯಲು ಸಾಧ್ಯವಿಲ್ಲ. ಆದ್ದರಿಂದ ಅರಣ್ಯದ ಉಳಿವು ಮನುಷ್ಯನ ಉಳಿವು ಎನ್ನುವುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

# ಪಶ್ಚಿಮ ಘಟ್ಟದ ಪರಿಸರ ಪೂರ್ವಿಕರ ಉಡುಗೊರೆ




**ಚಿಕ್ಕಮಗಳೂರು, ಅ.8:** ಪೂರ್ವಿಕರು ನಮ್ಮ ಜಿಲ್ಲೆಯ ಪಶ್ಚಿಮ ಘಟ್ಟದಲ್ಲಿರುವ ಸುಂದರವಾದ ಪರಿಸರವನ್ನು ನಮಗೆ ಉಡುಗೊರೆಯಾಗಿ ಉಳಿಸಿಕೊಟ್ಟಿದ್ದಾರೆ. ನಾವು ಅದನ್ನು ಅಳಿಸಿದ್ದೇ ಆದರೆ ಖಂಡಿತ ಮುಂದಿನ ಯುವಪೀಳಿಗೆ, ಜನಾಂಗಕ್ಕೆ ಅಪಾರವಾದ ಹಾನಿಯಾಗುವ ಸಾಧ್ಯತೆಯಿದೆ ಎಂದು ಶಾಸಕ ಹೆಚ್.ಡಿ.ತಮ್ಮಯ್ಯ ಎಚ್ಚರಿಸಿದರು.

ಕರ್ನಾಟಕ ಅರಣ್ಯ ಇಲಾಖೆ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದ ವನ್ಯಜೀವಿ ಸಪ್ತಾಹ–2025ರ ಅಂಗವಾಗಿ ಇಂದು ನಗರದ ತಹಸೀಲ್ದಾರ್ ಕಚೇರಿಯಿಂದ ಟೌನ್ ಮಹಿಳಾ ಸಮಾಜ ರೋಟರಿಯವರೆಗಿನ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಉಸಿರಾಟಕ್ಕೆ ಬೇಕಾದ ಒಳ್ಳೆಯ ಮರ ಹಾಗೂ ಗಿಡಗಳನ್ನು ಬೆಳೆಸಿದರೆ ನಮಗೆ ಉತ್ತಮ ಆಮ್ಲಜನಕ ದೊರಕಿ ಆರೋಗ್ಯವಂತರಾಗಿ ಬದುಕಲು ಸಾಧ್ಯವಾಗುತ್ತದೆ. ಜೊತೆಗೆ ಪ್ರಾಣಿ, ಪಕ್ಷಿಗಳಿಗೂ ಸಹಾಯವಾಗುತ್ತದೆ ಎಂದ ಅವರು, ಅರಣ್ಯ, ಪರಿಸರ ಉತ್ತಮವಾಗಿ ಉಳಿಸಿದರೆ ಊಹೆಗೂ ಮೀರಿದ ಮಳೆಯಾಗುತ್ತದೆ. ದಟ್ಟವಾದ ಅರಣ್ಯವಿರುವುದರಿಂದಲೇ ಆಗುಂಬೆ, ದೇವವೃಂದದಲ್ಲಿ ಅತೀ ಹೆಚ್ಚು ಮಳೆಯಾಗುತ್ತಿದೆ. ಹಾಗಾಗಿ ದಟ್ಟವಾದ ಅರಣ್ಯ ಉಳಿಸಿ ಬೆಳೆಸಿ, ಪರಿಸರ ಉಳಿಸುವಂತಹ ಕೆಲಸವನ್ನ ಜಿಲ್ಲಾಡಳಿತ, ಅರಣ್ಯ ಇಲಾಖೆ, ಸರ್ಕಾರ, ಎಲ್ಲ ಸಂಘ–ಸಂಸ್ಥೆಗಳ ಜವಾಬ್ದಾರಿ ಎಂದು ಹೇಳಿದರು.

ಭದ್ರಾ ಹುಲಿ ಅಭಯಾರಣ್ಯ ದೇಶದಲ್ಲಿ 2ನೇ ಸ್ಥಾನದಲ್ಲಿದ್ದು, ಅದೇ ರೀತಿಯಾಗಿ ಮುಂದುವರೆಯಬೇಕು. ಯಾವುದೇ ಕಾರಣಕ್ಕೂ 3ನೇ ಸ್ಥಾನಕ್ಕೆ ಹೋಗಬಾರದು ಎಂದು ಆಶಿಸಿದರು.

ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಮಾತನಾಡಿ, ಅರಣ್ಯವನ್ನು ಉಳಿಸಿ ಬೆಳೆಸುವುದರ ಜೊತೆಗೆ ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆ. ಪೀಳಿಗೆಗೆ ಪರಿಸರದ ಮಹತ್ವವನ್ನು ತಿಳಿಸಿಕೊಡಬೇಕಾಗುತ್ತದೆ ಎಂದರು. ಆಗಿನ ಕಾಲದಲ್ಲಿ ನೆರಳಿಗಾಗಿ, ಹಣ್ಣು ಹಂಪಲುಗಳಿಗಾಗಿ ಮರಗಳನ್ನು ಬೆಳೆಸುತ್ತಿದ್ದರು. ಆದರೆ ಈಗ ಆ ರೀತಿ ಒಂದೇ ಒಂದು ಹಣ್ಣಿನ ಮರಗಳಿಲ್ಲ ಎಂದು ಹೇಳಿದರು.

ಆಕೇಶಿಯಾ ಮತ್ತು ನೀಲಗಿರಿ ಮರವನ್ನು ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಬೆಳೆಯಬಾರದು ಎಂದು ಸರ್ಕಾರ ಆದೇಶ ನೀಡಿತ್ತು. ಇದುವರೆಗೂ ಇದು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಹೇಳಿದರು. ಆಗುಂಬೆ ಘಾಟ್, ಶಿರಾಡಿ ಘಾಟ್‌ನಲ್ಲಿ ಯಾವುದೇ ಹಣ್ಣಿನ ಮರಗಳು ಇಲ್ಲದಿರುವುದರಿಂದ ಪ್ರಯಾಣಿಕರು ಎಸೆದ ಹಣ್ಣುಗಳನ್ನು ತಿನ್ನಲು ಪ್ರಾಣಿಗಳು ಕಾದು ಕುಳಿತಿರುವುದನ್ನು ನಾವು ಗಮನಿಸಬಹುದು. ಹೀಗಾಗಿ ನಾವು ಪರಿಸರ ಸಂರಕ್ಷಣೆ ಮಾಡುವ ಸಂದರ್ಭದಲ್ಲಿ ಪ್ರಾಣಿ ಸಂಕುಲವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತಿಗೂ ಪ್ರಾಣಿ ಮತ್ತು ಮಾನವನ ನಡುವೆ ಸಂಘರ್ಷ ನಡೆಯುತ್ತಲೇ ಇದೆ, ಆನೆಗಳು, ಚಿರತೆಗಳು ನಾಡಿನ ಕಡೆ ಮುಖ ಮಾಡಿವೆ.

# ಸುಪ್ರೀಂಕೋರ್ಟ್‌ನಲ್ಲಿ ಶೂ ಎಸೆದ ಪ್ರಕರಣ ಖಂಡಿಸಿದ ಡಿಕೆಶಿ



**ಬೆಂಗಳೂರು,ಅ.8:** ಸುಪ್ರೀಂಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆತ ಘಟನೆ ಖಂಡನೀಯ, ನ್ಯಾಯ ನೀಡುವ ಸ್ಥಳದಲ್ಲಿ ಅಧರ್ಮ ತೋರಿಸುವುದನ್ನು ನಾವೆಲ್ಲರೂ ವಿರೋಧಿಸಬೇಕು. ತಪ್ಪಿತಸ್ಥನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು" ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಸುಪ್ರೀಂಕೋರ್ಟ್‌ನಲ್ಲಿ ಶೂ ಎಸೆತ ಪ್ರಕರಣದ ಬಗ್ಗೆ ಕೇಳಿದಾಗ, "ಮುಖ್ಯ ನ್ಯಾಯಮೂರ್ತಿಯವರು ತಪ್ಪಿತಸ್ಥನ ವಿರುದ್ಧ ಕ್ರಮ ತೆಗದುಕೊಳ್ಳಬೇಡಿ ಎಂದಿದ್ದಾರೆ. ಆದರೂ ಸುಮೋಟೋ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಬೇಕು" ಎಂದರು.

**ಕ್ಷಮೆಯಾಚನೆ:** ಮತ್ತೊಂದೆಡೆಯಲ್ಲಿ ಶೂ ಎಸೆತ ಘಟನೆಯನ್ನು ಸಮರ್ಥಿಸಿ ಪೋಸ್ಟ್ ಒಂದನ್ನು ಹಾಕಿದ್ದ ಬಿಜೆಪಿ ನಾಯಕ ಹಾಗೂ ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್ ತಮ್ಮ ಪೋಸ್ಟ್ ಅಳಿಸಿ ಹಾಕಿದ್ದಾರೆ ಹಾಗೆಯೇ ಇದಕ್ಕಾಗಿ ಕ್ಷಮೆಯಾಚಿಸಿದ್ದಾರೆ.

# ಜಾತಿಗಣತಿ ಹೆಸರಿನಲ್ಲಿ ಬೊಕ್ಕಸದ ಹಣ ಪೋಲು : ಆರ್. ಅಶೋಕ್ ಆಕ್ರೋಶ



**ಬೆಂಗಳೂರು,ಅ.8:** ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಹೆಸರಲ್ಲಿ ರಾಜ್ಯ ಸರ್ಕಾರ ಬೊಕ್ಕಸದ ಹಣವನ್ನು ಪೋಲು ಮಾಡುತ್ತಿದೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಪಾದಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಹೇಳಿಕೆಯೊಂದನ್ನು ಪೋಸ್ಟ್ ಮಾಡಿರುವ ಅವರು ಜಾತಿಗಣತಿ ಹೆಸರಿನಲ್ಲಿ ಹತ್ತು ವರ್ಷಗಳ ಹಿಂದೆಯೇ 150 ಕೋಟಿ ರೂಪಾಯಿ ಹಣವನ್ನು ಪೋಲು ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೆ ಅದಕ್ಕಿಂತಲೂ ಹೆಚ್ಚಿನ ಸಾರ್ವಜನಿಕ ಹಣವನ್ನು ಅಪವ್ಯಯ ಮಾಡಲು ಹೊರಟಿದ್ದಾರೆ ಎಂದು ಕಿಡಿ–ಕಾರಿದ್ದಾರೆ.

ಜಾತಿಗಣತಿ ನಡೆಸಲು ಎಷ್ಟು ಸಮಯ ಬೇಕು ಎನ್ನುವ ಬಗ್ಗೆ ಪೂರ್ವಯೋಜನೆ ಇಲ್ಲ? ಜಾತಿಗಣತಿಯಲ್ಲಿ ಯಾವ ಪ್ರಶ್ನೆ ಕೇಳಬೇಕು ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಜಾತಿಗಣ–ತಿಗೆ ಶಿಕ್ಷಕರನ್ನು ನಿಯೋಜನೆ ಮಾಡಿದರೆ ಸರ್ಕಾರಿ ಶಾಲೆಗಳಲ್ಲಿ ಯಾರು? ಪಾಠ ಮಾಡುತ್ತಾರೆ ಎನ್ನುವ ಬಗ್ಗೆ ಯೋಚನೆ ಮಾಡಲಿಲ್ಲ ಎಂದು ಆರೋಪಿಸಿದ್ದಾರೆ.

# ರಾಮಾಯಣದ ಆಶಯದಂತೆ ಇಂದು ರಾಮರಾಜ್ಯ ನಿರ್ಮಾಣವಾದರೆ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ: ಮಾಜಿ ಸಂಸದ ವಿ.ಎಸ್.ಉಗ್ರಪ್ಪ

**ದಾವಣಗೆರೆ.ಅ.8;** ದೆಹಲಿ– ಬೆಂಗಳೂರು ನಡುವೆ ಸಂಚರಿಸುವ ಯಾವುದಾದರೂ ರೈಲು ಮತ್ತು ಮೈಸೂರು– ಬೀದರ್ ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಗೆ ಮಹರ್ಷಿ ವಾಲ್ಮೀಕಿ ಅವರ ಹೆಸರು ನಾಮಕರಣ ಮಾಡಬೇಕೆಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಒತ್ತಾಯಿಸಿದರು.

ಬುಧವಾರ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ವಾಲ್ಮೀಕಿ ಪ್ರತಿಷ್ಠಾನ ಮತ್ತು ಸಾರ್ವಜನಿಕ ವಾಲ್ಮೀಕಿ ಜಯಂತ್ಯೋತ್ಸವ ಸಮಿತಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 4ನೇ ವರ್ಷದ ವಾಲ್ಮೀಕಿ ಜಯಂತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಏಳು ಸಾವಿರ ವರ್ಷಗಳ ಹಿಂದೆ ನಡೆದಿರುವ ರಾಮಾಯಣ ಮಹಾಕಾವ್ಯದ ಪ್ರತಿ ಕಾಂಡವನ್ನು ವಿಶೇಷ ಅರ್ಥ ಇಟ್ಟುಕೊಂಡೆ ರಚಿಸಲಾಗಿದೆ. ಸಹೋದರರು ಹೇಗಿರಬೇಕು, ಅವರ ನಡುವಿನ ಬಾಂಧವ್ಯ ಯಾವ ರೀತಿ ಇರಬೇಕು, ಮೊದಲಾದ ಮಾನವೀಯ ಸಂಬಂಧಗಳ ಕುರಿತು ಮಾಲ್ವಿಕವಾದ ಅರ್ಥಗಳು ರಾಮಾಯಣದಲ್ಲಿವೆ ಎಂದರು.

ಮಹಾತ್ಮ ಗಾಂಧೀಜಿ ಕೊನೆ ಉಸಿರು ಎಳೆಯುವಾಗ ಹೇ ರಾಮ್ ಎಂದು ಉದ್ಗರಿಸಿದರು. ವಾಲ್ಮೀಕಿ ಅವರ ರಾಮಾಯಣದ ಆಶಯದಂತೆ ಇಂದು ರಾಮರಾಜ್ಯ ನಿರ್ಮಾಣವಾದರೆ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂದು ಹೇಳದರು.

ಮಡಿವಾಳ ಮತ್ತು ಸವಿತಾ ಸಮಾಜವನ್ನು ಎಸ್ಸಿಗೆ ಸೇರ್ಪಡೆ ಮಾಡಬೇಕು.ಈ ಎರಡೂ ಜನಾಂಗ ನಿಜವಾಗಿಯೂ ಎಸ್ಸಿಗೆ ಸೇರಲು ಅರ್ಹತೆ ಹೊಂದಿವೆ. ರಸ್ತೆಯಲ್ಲಿ ಕ್ಷೌರಿಕರು ಎದುರು ಬಂದಾಗ ಅಪಶಕುನ ಎನ್ನುವುದು ಕೂಡ ಜಾತಿನಿಂದನೆಯಾಗಲಿದೆ. ಈ ಸಮಾಜದ ಜನರು ನಿಜವಾದ ಅಸ್ಪೃಶ್ಯತೆ ಎದುರಿಸುತ್ತಿದ್ದಾರೆ ಎಂದರು

ರಾಜ್ಯ ಸರ್ಕಾರ ಎಸ್ಟಿ ಸಮುದಾಯಕ್ಕೆ ಯಾರನ್ನಾದರೂ ಸೇರಿಸಲಿ ಆದರೆ ಹಿಂದುಳಿದ ವರ್ಗಗಳ ಮೀಸಲಾತಿಯ ಒಳಗೆ ಅವರನ್ನು ಎಸ್ಟಿಗೆ ಸೇರಿಸಿದರೆ ನಮ್ಮ ಯಾವುದೇ ಅಭ್ಯಂತರ ಇಲ್ಲ. ಆದರೆ ನೇರವಾಗಿ ಎಸ್ಟಿಗೆ ಸೇರಿಸುತ್ತೇನೆ ಎಂದರೆ ಅದಕ್ಕೆ ನಮ್ಮ ತೀವ್ರ ವಿರೋಧವಿದೆ. ಈ ರೀತಿಯ ಜಯಂತಿ, ಸಮಾವೇಶಗಳನ್ನು ಮಾಡಿದರೆ ಸರ್ಕಾರಕ್ಕೆ ಸಂದೇಶ ನೀಡುವಂತಿರಬೇಕು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇಂದಿನ ಸಮಾವೇಶದಲ್ಲಿ ಭಾಗವಹಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಈ ಮೂಲಕ ಸಮಾಜದ ಸಂಘಟನೆ ಇನ್ನೂ ಹೆಚ್ಚಾಗಬೇಕಿದೆ ಎಂದು ಹೇಳಿದರು.


ಎಪಿಎಂಸಿ ಮಾಜಿ ಅಧ್ಯಕ್ಷ ಅಣಜಿ ಚಂದ್ರಶೇಖರ್ ಮಾತನಾಡಿ, ಕಳೆದ 4 ವರ್ಷಗಳಿಂದ ನಾನೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಬುಡಕಟ್ಟು ಜನರು, ಮುಂದುವರಿದ ಸಮುದಾಯದ ಜನರು ಸೇರಿದಂತೆ ಎಲ್ಲ ಜನಾಂಗದವರು ಸೇರಿಕೊಂಡು ಜಯಂತಿ ಆಚರಿಸುವುದು ವಿಶೇಷವಾಗಿದೆ. ಈ ಜಯಂತಿಯನ್ನು ಇಲ್ಲಿಗೆ ನಿಲ್ಲಿಸದೇ ಮುಂದುವರಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಎಲ್ಲಾ ಜಾತಿ. ಜನಾಂಗದವರನ್ನು ಒಳಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವ ಉದ್ದೇಶ ಇಟ್ಟುಕೊಳ್ಳಲಾಗಿದೆ. ಒಂಭತ್ತು ದಿನಗಳ ಈ ವಿಶೇಷ ಕಾರ್ಯಕ್ರಮದಲ್ಲಿ ಮಹಿಳೆಯರು, ಯುವಕರು, ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಲಾಗುವುದು. ನಶಿಸಿ ಹೋಗುತ್ತಿರುವ ಕಲೆ. ಕಲಾವಿದರಿಗೆ ಉತ್ತೇಜನ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ರಾಜನಹಟ್ಟಿ ರಾಜು. ಎಲೋದಹಳ್ಳಿ ರವಿ, ಚಿಕ್ಕಮಲ್ಲನಹೊಳೆ ಚಿರಂಜೀವಿ, ಅರನಾಕನಹಳ್ಳಿ ಪರಮೇಶ್ವರಪ್ಪ, ಹೂವಿನ ಮಡು ನಾಗರಾಜ್, ಕಿತ್ತೂರು ನಳಿನಮ್ಮ, ಗಿರಿಯಾಪುರ ಶಶಿಕಲಾ, ಹುಚ್ಚವ್ವನಹಳ್ಳಿ ಪ್ರಕಾಶ್ ಇತರರು ಉಪಸ್ಥಿತರಿದ್ದರು.

ಅದ್ದೂರಿ ಮೆರವಣಿಗೆ; ಇದಕ್ಕೂ ಮುನ್ನ ಬೆಳಿಗ್ಗೆ 11.30ಕ್ಕೆ ನಗರದ ಹೊಸ ಬಸ್ ನಿಲ್ದಾಣದ ಮುಂಭಾಗದಿಂದ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದ ಅದ್ದೂರಿ ಮೆರವಣಿಗೆ ಆರಂಭಗೊಂಡಿತು. ವಿವಿಧ ಜಾನಪದ ಕಲಾತಂಡಗಳು ಮೆರಗು ನೀಡಿದ್ದವು. ಜಯದೇವ ವೃತ್ತ, ಅಂಬೇಡ್ಕರ್ ವೃತ್ತ, ವಿದ್ಯಾರ್ಥಿ ಭವನದ ಮೂಲಕ ಹಾದು ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರಕ್ಕೆ ಆಗಮಿಸಿತು.

# ಪಂಚ ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ 568 ಕೋಟಿ ಮಹಿಳೆಯರು ಸದುಪಯೋಗಪಡೆದುಕೊಂಡಿದ್ದಾರೆ: ಸಚಿವ ರಾಮಲಿಂಗಾ ರೆಡ್ಡಿ ಅಭಿಮತ



**ಚನ್ನಗಿರಿ:** ಕರ್ನಾಟಕ ರಾಜ್ಯದಲ್ಲಿ ಸರಕಾರದ ಶಕ್ತಿ ಯೋಜನೆ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ಮತ್ತು ಕುಟುಂಬಗಳು ಅರ್ಥಿಕವಾಗಿ ಸದೃಡವಾಗಿದ್ದು ರಾಜ್ಯದಲ್ಲಿ 568 ಕೋಟಿ ಮಹಿಳೆಯರು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಂಡಿದ್ದು ರಾಜ್ಯ ಸರಕಾರ ಈ ಯೋಜನೆಗಾಗಿ 16.50 ಕೋಟಿ ಹಣವನ್ನು ಖರ್ಚು ಮಾಡಿದೆ ಎಂದು ಸಾರಿಗೆ ಮತ್ತು ಮುಜುರಾಯಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಬುಧವಾರ ಚನ್ನಗಿರಿ ಪಟ್ಟಣದ ಅಜ್ಜಿಹಳ್ಳಿ ಗ್ರಾ.ಪಂ.ವ್ಯಾಪ್ತಿಯಲ್ಲಿ 8 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣ ಮಾಡಲಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ದಾವಣಗೆರೆ ವಿಬಾಗದ ಚನ್ನಗಿರಿಯ ನೂತನ ಬಸ್‌ಘಟಕದಿಂದ ಹೊರಟ ಬಸ್‌ಗಳಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಚನ್ನಗಿರಿ ಪಟ್ಟಣದಲ್ಲಿ ಇಂದು 8 ಕೋಟಿ ರೂ ವೆಚ್ಚದ ಬಸ್‌ನಿಲ್ದಾಣ ಆಗತ್ಯ ಸಿಬ್ಬಂದಿಗಳು ಮತ್ತು ಪೂರಕ ಬಸ್‌ಗಳನ್ನು ಸಹ ನೀಡಲಾಗಿದೆ. ಅಗತ್ಯವಿರುವಂತಹ ಗ್ರಾಮೀಣ ಪ್ರದೇಶಗಳಿಗೆ ಬಸ್‌ಗಳನ್ನು ಬಿಡುವಂತಹ ಸೌಲಭ್ಯ ಕಲ್ಪಿಸಲಾಗುವುದು ಎಂದರು. ಚನ್ನಗಿರಿಯ ಶಾಸಕರು ಡಿಪೋ ಜೊತೆಯಲ್ಲಿ ಒಂದು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಿಕೊಡುವಂತೆ ಮನವಿ ಮಾಡಿದ್ದು ಅದರಂತೆ ಬಸ್‌ನಿಲ್ದಾಣಕ್ಕೆ ಸ್ಥಳವನ್ನು ನೀಡಿ–ದರೆ ಶೀಘ್ರವೇ ಬಸ್‌ನಿಲ್ದಾಣವನ್ನು ಮಂಜೂರಾತಿ ಮಾಡಲಾಗುವುದು ಎಂದರು. ಬೆಂಗಳೂರು ಹೊರತು ಪಡಿಸಿದರೆ ಅತಿ ದೊಡ್ಡ ಕೆ.ಎಸ್.ಆರ್.ಟಿ.ಟಿ. ಬಸ್ ನಿಲ್ದಾಣ ಇರುವುದು ದಾವಣಗೆರೆಯಲ್ಲಿ ಮತ್ತು ತುಮಕೂರಿನಲ್ಲಿ ಆಗಿದೆ. ಮಾಯಕೊಂಡ ಕ್ಷೇತ್ರದ ಶಾಸಕರಾದ ಬಸವಂತಪ್ಪನವರು ಮಾಯಕೊಂಡಕ್ಕೆ ಒಂದು ಉತ್ತಮ ಬಸ್ ನಿಲ್ದಾಣಕ್ಕೆ ಮನವಿಯನ್ನು ಸಲ್ಲಿಸಿದ್ದು ಬಸ್ ನಿಲ್ದಾಣಕ್ಕೆ ಜಾಗವನ್ನು ನೀಡಿದರೆ ತಕ್ಷಣವೇ ನೀಡುವುದಾಗಿ ತಿಳಿಸಿದರು. ಹಿಂದಿನ ಸರಕಾರದಲ್ಲಿ ಸಾರಿಗೆ ಸಂಸ್ಥೆಗೆ ಒಂದೂ ಹೊಸ ಬಸ್‌ನ್ನು ಖರೀದಿ ಮಾಡಿದ್ದಿಲ್ಲ. ನಮ್ಮ ಸರಕಾರದ ಅವಧಿಯಲ್ಲಿ 900 ಹೊಸ ಬಸ್‌ಗಳನ್ನು ಖರೀದಿ ಮಾಡಲಾಗಿದೆ. ಶಕ್ತಿ ಯೋಜನೆಯಿಂದ ಮಹಿಳೆಯರು ಉದ್ಯೋಗದ ಪ್ರಮಾಣ ಶೇ 23 ರಷ್ಟು ಹೆಚ್ಚಾಗಿದೆ. ಹಿಂದಿನ ಸರಕಾರವು ಒಟ್ಟು 80.000 ಕೋಟಿ ಬಿಲ್ ಬಾಕಿ ಇರಿಸಿ ಹೋಗಿದ್ದು 2 ಲಕ್ಷ 70.000 ಕೋಟಿ ವಿವಿಧ ಕಾಮಗಾರಿಗಳ ಟೆಂಡರ್‌ಗಳನ್ನು ಕರೆದಿದ್ದರು. ಆದರೆ ಹಣವಿಲ್ಲದೇ ಈ ಟೆಂಡರ್‌ಗಳನ್ನು ಯಾಕೆ ಕರೆಯಬೇಕು ಎಂದರು.

ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ದಾವಣಗೆರೆಗೆ ಉತ್ತಮ ಬಸ್‌ನಿಲ್ದಾಣವನ್ನು ಸಾರಿಗೆ ಮಂತ್ರಿಗಳು ಕೊಡುಗೆಯಾಗಿ ನೀಡಿದ್ದು ಇಂದು ತಾಲೂಕು ಕೇಂದ್ರಗಳಿಗೆ ವಿಸ್ತರಿಸುತ್ತಿದ್ದು ಚನ್ನಗಿರಿಯಲ್ಲಿ ಉತ್ತಮ ಡಿಪೋ ನಿರ್ಮಾಣವಾಗಿದೆ. ಚನ್ನಗಿರಿ ಎಲ್ಲಾ ಜಿಲ್ಲಾ ಕೇಂದ್ರ ಗಳಿಗೂ ಮಧ್ಯಬಾಗದಲ್ಲಿದ್ದು ಸಾರಿಗೆ ವ್ಯವಸ್ಥೆ ಆಗತ್ಯವಾಗಿದೆ. ಜೆ.ಎಚ್. ಪಟೇಲರು, ಎನ್.ಜಿ.ಹಾಲಪ್ಪನವರು ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ರಾಜಕಾರಣವನ್ನು ಮಾಡಿದ್ದು ಅವರ ಹಾದಿಯಲ್ಲಿ ಬಸವರಾಜ್ ಶಿವಗಂಗಾ ನಡೆಯುವಂತೆ ಕಿವಿ ಮಾತು ಹೇಳಿದರು.ದಾವಣಗೆರೆಯ ಹೊನ್ನಾಳಿ ಜಗಳೂರು ಬಾಗಗಳಿಗೂ ಡಿಪೋದ ಆಗತ್ಯವಿದ್ದು ಮುಂದಿನ ದಿನಗಳಲ್ಲಿ ಮಂಜೂರಾತಿ ಮಾಡಿಕೊಡುವಂತೆ ಮನವಿ ಮಾಡಿದರು. ದಾವಣಗೆರೆ ಜಿಲ್ಲೆಯಲ್ಲಿ ಶಕ್ತಿ ಯೋಜನೆಯಲ್ಲಿ ಒಟ್ಟು 10 ಕೋಟಿ ಮಹಿಳೆಯರು ಪ್ರಯಾಣ ಮಾಡಿದ್ದು ಚನ್ನಗಿರಿ ತಾಲೂಕಿನಿಂದ 1 ಲಕ್ಷ 31.000 ಜನ ಮಹಿಳೆಯರು ಸೌಲಭ್ಯ ಪಡೆದುಕೊಂಡಿದ್ದು ಬಡವರಿಗೆ ಅನುಕೂಲವಾಗುವ ಕೆಲಸವನ್ನು ರಾಜ್ಯ ಸರಕಾರ ಮಾಡಿದೆ.ಸಾರಿಗೆ ಮಂತ್ರಿಗಳು ಇನ್ನೂ ಹೆಚ್ಚಿನ ಬಸ್‌ಗಳನ್ನು ಬಿಡುವ ವ್ಯವಸ್ಥೆಯನ್ನು ಮಾಡುವ ಭರವಸೆಯನ್ನು ನೀಡಿದ್ದು ಕಾಂಗ್ರೇಸ್ ಸರಕಾರ ಜನರ ಪರವಾಗಿ ಇದೆ ಎಂದರು.

ಶಾಸಕ ಬಸವಂತಪ್ಪ ಮಾತನಾಡಿ ಚನ್ನಗಿರಿ ತಾಲೂಕಿನಲ್ಲಿ ಬಹುತೇಕ ಅರ್ಥಿಕವಾಗಿ ಸದೃಡರಾಗಿದ್ದು ಚನ್ನಗಿರಿಯ ಅಭಿವೃದ್ದಿಯಲ್ಲಿ ಸಾರಿಗೆ ವ್ಯವಸ್ಥೆಯು ಪ್ರಮುಖ ಪಾತ್ರವನ್ನು ವಹಿಸಲಿದೆ. ಮಾಯಕೊಂಡ ಕ್ಷೇತ್ರದ ಬಸವಾಪಟ್ಟಣದ ಹೋಬಳಿಯ ಗ್ರಾಮೀಣ ಪ್ರದೇಸದ ಬಾಗಗಳಿಗೆ ಸಂಪರ್ಕ ಕಲ್ಪಿಸಬೇಕಿದೆ. ರಾಮಲಿಂಗರೆಡ್ಡಿಯವರು ಅನುಭವಿಗಳು ಮತ್ತು ಹಿರಿಯರಾಗಿದ್ದು ಸಾರಿಗೆಯ ಅಭಿವೃದ್ದಿಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮಾಯಕೊಂಡ ಕ್ಷೇತ್ರವು ಗ್ರಾ.ಪಂ.ಇದ್ದು ನಾವು ಸ್ಥಳವನ್ನು ನೀಡುತ್ತೇವೆ ಅಲ್ಲಿಗೆ ಉತ್ತಮ ಬಸ್ ನಿಲ್ದಾಣದ ಮತ್ತು ಡಿಪೋ ವ್ಯವಸ್ಥೆ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

# ವಿದ್ಯುತ್ ಸಮಸ್ಯೆ ಬಗೆಹರಿಸಲು ಜಿಲ್ಲೆಗೆ 250 ಕೋಟಿ ರೂ. ಮಂಜೂರು: ಕೆ.ಜೆ.ಜಾರ್ಜ್

**ಚಿಕ್ಕಮಗಳೂರು:** ಚಿಕ್ಕಮಗಳೂರು ಜಿಲ್ಲೆಯ ಅವಶ್ಯಕತೆಗೆ ತಕ್ಕಂತೆ ವಿದ್ಯುತ್ ಸಮಸ್ಯೆ ಬಗೆಹರಿಸಲು ಸುಮಾರು 250 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದು, ಅಗತ್ಯವಿರುವ ಯೋಜನೆಗಳಿಗೆ ಬಳಸುವುದಾಗಿ ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಜಯಪುರದ ನೂತನ ಸಮುದಾಯ ಆರೋಗ್ಯ ಕೇಂದ್ರದ ಉದ್ಘಾಟನೆ ಬಳಿಕ ಅಲ್ಲಿನ ಬಸ್ ನಿಲ್ದಾಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಲ್ಲೆಯ ವಿದ್ಯುತ್ ಮಾರ್ಗದ ಬದಲಾವಣೆ, ಹೊಸ ಕಂಬಗಳ ಅಳವಡಿಕೆ ಮತ್ತಿತರ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ರೈತರಿಗೆ ಸಮರ್ಪಕವಾಗಿ ನೀರು ಒದಗಿಸಬೇಕೆಂಬ ಉದ್ದೇಶ ನಮ್ಮದಾಗಿದ್ದು, ರೈತರು ಚೆನ್ನಾಗಿದ್ದರೆ ಹಗಲು, ರಾತ್ರಿ ದುಡಿಯುವ ರೈತರು ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪಾವಗಡದ ರಾಬ್ಟೆಯಲ್ಲಿ ರೈತರಿಂದ ಗುತ್ತಿಗೆಗೆ ಪಡೆದ ಜಮೀನಿನಲ್ಲಿ ಸೋಲಾರ್ ಪಾರ್ಕ್‌ನಲ್ಲಿ 2150 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ವಿದ್ಯುತ್ 1159 ಬ್ಯಾಟರಿ ಸ್ಟೋರೇಜ್ ಮಾಡುವ ಕಾರ್ಯ ಕೊನೆಯ ಹಂತದಲ್ಲಿದೆ ಎಂದು ತಿಳಿಸಿದರು.



ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ವಿದ್ಯುತ್ ಬೇಡಿಕೆ 8–9 ಸಾವಿರದಿಂದ ಒಂದೇ ತಿಂಗಳಲ್ಲಿ 14 ಸಾವಿರ, 19 ಸಾವಿರ ಯೂನಿಟ್‌ಗೆ ಏರಿತು. ಈ ನಡುವೆ ಮುಖ್ಯಮಂತ್ರಿಗಳು ಕೆಲವೆಡೆ ಭೇಟಿ ನೀಡಿದ ಸಂದರ್ಭ ರೈತರು ನಮಗೆ ಏಳು ಗಂಟೆ ಅಥವಾ ಕನಿಷ್ಠ ಐದು ಗಂಟೆಯಾದರೂ ವಿದ್ಯುತ್ ಪೂರೈಕೆ ಮಾಡುವಂತೆ ಬೇಡಿಕೆ ಇಟ್ಟರು. ಮುಖ್ಯಮಂತ್ರಿಗಳು ಅಧಿಕಾರಿಗಳ ಸಭೆಯಲ್ಲಿ ಸಮಾಲೋಚಿಸಿದ ಬಳಿಕ ಐದು ಗಂಟೆ ಮಾತ್ರ ವಿದ್ಯುತ್ ಮಾಡಬಹುದು ಎಂದು ತಿಳಿಸಿದರು.

ರೈತರ ನೀರಾವರಿ ಯೋಜನೆಗೆ ರಾಜ್ಯ ಸರ್ಕಾರದಿಂದ ಎಸ್ಕಾಂಗೆ ಹಣ ಭರಿಸಲಾಗುತ್ತಿದೆ. ಈ ಮೊದಲು 18 ಸಾವಿರ ಕೋಟಿ ರೂ. ನೀಡಲಾಗುತ್ತಿತ್ತು. ಆ ಮೊತ್ತ ಈ ವರ್ಷ 23 ಸಾವಿರ ಕೋಟಿಗೆ ಏರಿಕೆಯಾಗಿದೆ. ಈ ಮೊತ್ತವನ್ನು ರಾಜ್ಯ ಸರ್ಕಾರ ಪ್ರತೀ ತಿಂಗಳು, ಎರಡು ತಿಂಗಳಿಗೊಮ್ಮೆ ಸರ್ಕಾರಕ್ಕೆ ನೀಡುತ್ತಲೇ ಬಂದಿದೆ ಎಂದು ಮಾಹಿತಿ ನೀಡಿದರು.

ಹೀಗಿದ್ದರೂ ಮುಖ್ಯಮಂತ್ರಿಗಳು ಏಳು ಗಂಟೆ ವಿದ್ಯುತ್ ಪೂರೈಕೆ ಮಾಡಲು ಪ್ರಯತ್ನಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಅಧಿಕಾರಿಗಳಾದ ಗೌರವ್ ಗುಪ್ತಾ ಹಾಗೂ ಪಂಕಜ್ ಪಾಂಡೆಯವರು ಅತ್ಯಂತ ದಕ್ಷರಾಗಿದ್ದು, ಅವರ ನೇತೃತ್ವದ ದಕ್ಷ ತಂಡ ಉತ್ತರ ಪ್ರದೇಶ ಹಾಗೂ ಪಂಜಾಬ್ ಸರ್ಕಾರದ ಜೊತೆಗೆ ವ್ಯವಹರಿಸಿದ್ದು, ಅಗತ್ಯವಿರುವಷ್ಟು ವಿದ್ಯುತ್ ಪಡೆದು ರೈತರಿಗೆ ಏಳು ಗಂಟೆ ಕಾಲ ಒದಗಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಅಗತ್ಯವಾದ ವಿದ್ಯುತ್ ನಮ್ಮ ಬಳಿ ಇದ್ದರೂ ಕೊನೆಯ ಹಂತದವರೆಗೆ ವಿದ್ಯುತ್ ನೀಡಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ನಮಗೆ ಕಂಡಕ್ಟರ್‌ಗಳು ಹೆಚ್ಚಿಗೆ ಬೇಕಾಗುತ್ತದೆ. ನಮ್ಮ ಸಬ್ ಸ್ಟೇಷನ್‌ಗಳು ಹೆಚ್ಚಾಗಬೇಕಾಗುತ್ತದೆ. ಅದು ಸಹ ಹಲವಾರು ವರ್ಷಗಳಿಂದ ಸಾಧ್ಯವಾಗದೇ ಇದ್ದು, ಈ ವರ್ಷ ಸುಮಾರು 100 ಉಪ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ ಎಂದು ಹೇಳಿದರು.

ಕುಸುಮ್ ಸಿ. ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಬಗ್ಗೆ ಅಗತ್ಯ ಮಾಹಿತಿ ಪಡೆಯಲು ಈ ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಿರುವ ಮಹಾರಾಷ್ಟ್ರಕ್ಕೆ ಅಧಿಕಾರಿಗಳು ತೆರಳಿ ಮಾಹಿತಿ ಪಡೆದುಕೊಂಡಿದ್ದಾರೆ. ಈ ಯೋಜನೆ ಅನುಷ್ಠಾನವಾದರೆ ನಾವು ಸ್ಥಾಪಿಸುವ ಉಪಕೇಂದ್ರಗಳ ಪಕ್ಕದಲ್ಲೇ 10 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಸಾಧ್ಯವಾಗುತ್ತದೆ. ಈ ವಿಚಾರವನ್ನು ಸದನದ ಮುಂದಿಟ್ಟು ಈಗಾಗಲೇ 2500 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಟೆಂಡರ್ ಪ್ರಕ್ರಿಯೆ ನಡೆದಿದೆ. ಇದರಿಂದ ಹಗಲು ಹೊತ್ತಿನಲ್ಲೇ 7 ರಿಂದ 8 ಗಂಟೆ ಕಾಲ ವಿದ್ಯುತ್ ಒದಗಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಅದೇ ರೀತಿ ಕುಸುಮ್ ಬಿ.ಯೋಜನೆಯಲ್ಲಿ ಈಗಾಗಲೇ 40 ಸಾವಿರ ಪಂಪ್‌ಸೆಟ್‌ಗೆ ರಾಜ್ಯದ ಶೇ.50 ಹಾಗೂ ಕೇಂದ್ರದ ಶೇ.30 ಸೇರಿ ಒಟ್ಟು ಶೇ.80 ರಷ್ಟು ಸಹಾಯಧನವನ್ನು ನೀಡಲಾಗುತ್ತದೆ. ಈ ಯೋಜನೆಗೆ ರೈತರು ಕೊಳವೆಬಾವಿಗಳನ್ನು ಹೊಂದಿರಬೇಕು. ಉಳಿದ ಶೇ.20 ರಷ್ಟು ಮೊತ್ತದಲ್ಲಿ ರೈತರಿಗೆ ಅಗತ್ಯವಿರುವ ಪರಿಕರವನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ದಿನೇಶ್ ಗುಂಡೂರಾವ್ ಅವರು ನೂತನ ಸಮುದಾಯ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಟಿ.ಡಿ.ರಾಜೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ.ಅಂಶುಮಂತ್, ಜಯಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಕರುಣಾಕರ್, ಜಿಲ್ಲಾಧಿಕಾರಿ ಸಿ.ಎನ್.ಮೀನಾ ನಾಗರಾಜ್, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಎಸ್.ಕೀರ್ತನಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅಶ್ವತ್ಥ್‌ಬಾಬು ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

## ರಾಶಿ ಭವಿಷ್ಯ

### ಮೇಷ ರಾಶಿ

ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ದಿನದಆರಂಭವು ಚೆನ್ನಾಗಿ ಅಗಿದರು, ಸಂಜೆಯ ಸಮಯದಲ್ಲಿ ಯಾವುದೇ ಕಾರಣದಿಂದ ನಿಮ್ಮ ಹಣ ಖರ್ಚಾಗಬಹುದು. ಇದರಿಂದ ನೀವು ತೊಂದರೆಗೊಳಗಾಗಬಹುದು. ಗುಂಪಿನಲ್ಲಿದ್ದಾಗ ನೀವೇನು ಹೇಳುತ್ತೀರೆಂದು ಎಚ್ಚರ ವಹಿಸಿ–ನಿಮ್ಮ ಹಠಾತ್ ಟೀಕೆಗಳಿಗೆ ನೀವು ತೀವ್ರವಾಗಿ ಟೀಕೆ ಎದುರಿಸಬೇಕಾಗಬಹುದು. ವೈಯಕ್ತಿಕ ಮಾರ್ಗದರ್ಶನ ನಿಮ್ಮ ಸಂಬಂಧವನ್ನು ಸುಧಾರಿಸುತ್ತದೆ.

### ವೃಷಭ ರಾಶಿ

ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ ಅಥವಾ ಪೋಷಕರೊಂದಿಗೆ ಮಾತನಾಡಿ.

### ಮಿಥುನ ರಾಶಿ

ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ನೀವು ಕುಟುಂಬದ ಸದಸ್ಯರ ಜೊತೆ ಸ್ವಲ್ಪ ತೊಂದರೆ ಹೊಂದಿದ್ದರೂ ಇದು ನಿಮ್ಮ ಮನಶ್ಶಾಂತಿಯನ್ನು ಹಾಳು ಮಾಡಲು ಅವಕಾಶ ನೀಡಬೇಡಿ. ಡೇಟ್ ಕಾರ್ಯಕ್ರಮ ವಿಫಲವಾಗಬಹುದಾದ್ದರಿಂದ ನಿರಾಶೆಯಾಗಬಹುದು. ದೇಶಿ ವ್ಯಾಪಾರಕ್ಕೆ ಸೇರಿರುವ ಜನರು, ಇಂದು ಅವರು ಅಪೇಕ್ಷಿತ ಫಲಿತಾಂಶವನ್ನು ಪಡೆಯುವ ಸಂಪೂರ್ಣ ಭರವಸೆ ಇದೆ.

### ಕರ್ಕ ರಾಶಿ

ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ ಮನೆಯ ಕೆಲಸ ಸುಸ್ತು ಮಾಡುತ್ತದೆ ಮತ್ತು ನಿಮ್ಮನ್ನು ಮಾನಸಿಕ ಒತ್ತಡದಲ್ಲಿರಿಸುತ್ತದೆ. ನಿಮ್ಮ ಗೆಳತಿ ನಿಮಗೆ ಮೋಸ ಮಾಡಬಹುದು.

### ಸಿಂಹ ರಾಶಿ

ಸ್ವಲ್ಪ ಮನರಂಜನೆಗಾಗಿ ನಿಮ್ಮ ಕಚೇರಿಯಿಂದ ಬೇಗನೇ ಹೆಣಟಿಜಜಜಿಟಿಜಜರಬರಲು ಪ್ರಯತ್ನಿಸಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ. ಹರಟೆ ನಿಮ್ಮ ಸಮಯ ವ್ಯರ್ಥ ಮಾಡುವುದಕ್ಕಿಂತ ಸುಮ್ಮನಿರುವುದು ಉತ್ತಮ. ನಾವು ಬುದ್ಧಿವಂತ ಚಟುವಟಿಕೆಗಳ ಮೂಲಕ ಜೀವನಕ್ಕೆ ಅರ್ಥ ನೀಡುತ್ತೇವೆಂದು ನೆನಪಿಡಿ.

### ಕನ್ಯಾ ರಾಶಿ

ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು. ಗುಣಪಡಿಸಲಾರದ್ದನ್ನು ತಡೆದುಕೊಳ್ಳಬೇಕು ಎಂದು ನೆನಪಿಡಿ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ನಿಮಗೆ ಹಣದ ಅಗತ್ಯವಿರುತ್ತದೆ ಆದರೆ ನಿಮ್ಮ ಸಾಕಷ್ಟು ಹಣ ಇರುವುದಿಲ್ಲ.

### ತುಲಾ ರಾಶಿ

ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ ಇವು ನಿಮ್ಮ ಮನಸ್ಸಿನ ಮೇಲೆ ಒತ್ತಡ ತರುತ್ತವೆ. ನಿಮ್ಮ ಪ್ರೀತಿಪಾತ್ರರ ನಿಷ್ಠೆಯನ್ನು ಅನುಮಾನಿಸಬೇಡಿ.

### ವೃಶ್ಚಿಕ ರಾಶಿ

ಸಂಗಾತಿಯ ಆರೋಗ್ಯಕ್ಕೆ ಸೂಕ್ತ ರಕ್ಷಣೆ ಮತ್ತು ಗಮನದ ಅಗತ್ಯವಿದೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನಿಮ್ಮ ಸಹೋದರನಿಗೆ ವಿಷಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಸಹಾಯ ಮಾಡಿ. ವ್ಯಾಜ್ಯಗಳನ್ನು ಅನಗತ್ಯವಾಗಿ ಹೆಚ್ಚಿಸದೇ ಅವುಗಳನ್ನು ಸೌಹಾರ್ದತೆಯಿಂದ ಪರಿಹರಿಸಲು ಪ್ರಯತ್ನಿಸಿ. ನಿಮ್ಮ ಪ್ರೇಮ ಜೀವನ ಶರದೃತುವಿನಲ್ಲಿನ ಮರದ ಎಲೆಯಂತಿರುತ್ತದೆ.

### ಧನು ರಾಶಿ

ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಬೆಳಕನ್ನು ನೀಡುತ್ತದೆ.

### ಮಕರ ರಾಶಿ

ಜನರಲ್ಲಿ ಬೆರೆಯುವ ಭಯ ನಿಮ್ಮನ್ನು ಧೈರ್ಯಗೆಡಿಸಬಹುದು. ಇದನ್ನು ತೆಗೆದುಹಾಕಲು ನಿಮ್ಮ ಸ್ವಾಭಿಮಾನವನ್ನು ಪ್ರೋತ್ಸಾಹಿಸಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಭಾವನಾತ್ಮಕ ಭರವಸೆಗಳನ್ನು ಬಯಸುವವರು ಹಿರಿಯರು ಅವರ ನೆರವಿಗೆ ಬರುವುದನ್ನು ನೋಡಬಹುದು. ಪ್ರಣಯ ನಿಮ್ಮ ಹೃದಯ ಮತ್ತು ಮನಸ್ಸನ್ನು ಆಳುತ್ತದೆ.

### ಕುಂಭ ರಾಶಿ

ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ. ಕೆಲಸದ ಒತ್ತಡ ನಿಮ್ಮ ಮನಸ್ಸನ್ನು ಆವರಿಸುತ್ತದೆ ಹಾಗೂ ಇದು ಕುಟುಂಬ ಮತ್ತು ಸ್ನೇಹಿತರಿಗೆ ಯಾವುದೇ ಸಮಯವಿಲ್ಲದಂತೆ ಮಾಡುತ್ತದೆ.

### ಮೀನ ರಾಶಿ

ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು, ಇದರ ಕಾರಣದಿಂದ ನೀವು ಮಾನಸಿಕ ಒತ್ತಡಗೊಳಗಾಗಬಹುದು. ನೀವು ಕಛೇರಿಯಲ್ಲಿ ಹೆಚ್ಚು ಸಮಯ ಕಳೆದರೆ ನಿಮ್ಮ ಮನೆಯ ಜೀವನಕ್ಕೆ ಹಾನಿಯಾಗಬಹುದು. ಪ್ರೀತಿ ಕೇವಲ ವಸಂತ; ಹೂಗಳು, ಗಾಳಿ, ಬಿಸಿಲು, ಚಿಟ್ಟೆಗಳು. ನೀವು ಇಂದು ಪ್ರಣಯದ ಕಚಗುಳಿಯನ್ನು ಅನುಭವಿಸುತ್ತೀರಿ.


# ಸತ್ಯ ಮತ್ತು ಸಾಮಾಜಿಕ ನ್ಯಾಯದ ಹರಿಕಾರ ಮಹರ್ಷಿ ವಾಲ್ಮೀಕಿ



**ಗದಗ** : ಭಾರತೀಯ ಸಂಸ್ಕೃತಿ, ಧರ್ಮ, ಸಮಾಜ, ಜೀವನ ಮೌಲ್ಯಗಳ ಹಿರಿಮೆಯನ್ನು 'ರಾಮಾಯಣ' ಕಾವ್ಯದ ಮೂಲಕ ಜಗತ್ತಿಗೆ ಪರಿಚಯಿಸಿರುವ ಮಹರ್ಷಿ ವಾಲ್ಮೀಕಿ ಸಾರ್ವಕಾಲಿಕ ಸಂತರಾಗಿದ್ದು, ಮಾನವರು ಸತ್ಯ, ಧರ್ಮ, ತ್ಯಾಗ, ಕರುಣೆ, ಸಹಾನುಭೂತಿ ಇತ್ಯಾದಿ ಆದರ್ಶಗಳು ಮತ್ತು ಕ್ರೋಧ, ಮಾನ, ಮಾಯಾ, ಲೋಭ ಇತ್ಯಾದಿ ಕಷಾಯಗಳಿಂದ ಹೊಂದುವ ಸ್ಥಾನಮಾನಗಳನ್ನು ಕಾವ್ಯದಲ್ಲಿ ವಿವಿಧ ಪಾತ್ರಗಳ ಮೂಲಕ ಚಿತ್ರಿಸಿರುವ ಅವರ ಬರವಣಿಗೆ ಕಲೆ ಇಂದಿಗೂ ಆದರ್ಶವಾಗಿದೆ ಎಂದು ಪ್ರೊ. ಸುಧಾ ಕೌಜಗೇರಿ ಹೇಳಿದರು. ಅವರು ಹುಲಕೋಟಿಯ ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ಮಹರ್ಷಿ ವಾಲ್ಮೀಕಿ ಜಯಂತಿ'ಯ ಅಧ್ಯಕ್ಷೀಯ ನುಡಿಗಳನ್ನಾಡುತ್ತ ಸತ್ಯ ಮತ್ತು ಸಾಮಾಜಿಕ ನ್ಯಾಯದ ಹರಿಕಾರ ಮಹರ್ಷಿ ವಾಲ್ಮೀಕಿ ಅವರ ಚಿಂತನೆಗಳು, ವಿಚಾರಗಳು, ಸಂದೇಶಗಳು ಇಂದು ತುಂಬಾ ಪ್ರಸ್ತುತವಾಗಿವೆಯೆಂದು ಹೇಳಿದರು.

ಇತಿಹಾಸ ಪ್ರಾಧ್ಯಾಪಕ ಮತ್ತು ಎನ್.ಎಸ್.ಎಸ್. ಘಟಕದ ಸಂಯೋಜಕ ಪ್ರೊ. ಅಪ್ಪಣ್ಣ ಹಂಜೆ ರಾಮಾಯಣ ಮಹಾಕಾವ್ಯದ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮಹತ್ವವನ್ನು ಪರಿಚಯಿಸುತ್ತ ಪಾಶ್ಚಾತ್ಯ ಸಂಸ್ಕೃತಿ, ವಿಚಾರ, ಸಿದ್ಧಾಂತ, ವಾದಗಳ ಪ್ರಭಾವದಿಂದ ಕಲುಷಿತವಾಗುತ್ತಿರುವ ಮನಸ್ಸುಗಳಿಗೆ ಈ ಮಹಾಕಾವ್ಯದ ಓದು ಅಗತ್ಯವಾಗಿದೆ ಎಂದು ಹೇಳಿದರು. ಕನ್ನಡ ಪ್ರಾಧ್ಯಾಪಕ ಮತ್ತು ಸಾಂಸ್ಕೃತಿಕ ವಿಭಾಗದ ಸಂಯೋಜಕ ರಮೇಶ ಹುಲಕುಂದ ರಾಮಾಯಣ ಮಹಾಕಾವ್ಯದ ಭಾಷೆ, ಸಾಹಿತ್ಯದ ಕುರಿತು ಮಾತನಾಡಿದರು. ಉಮೇಶ ಹುಯಿಲಗೋಳ ಪೂಜೆ ನೆರವೇರಿಸಿದರು. ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕ ಮತ್ತು ಆಂತರಿಕ ಪರೀಕ್ಷಾ ಸಂಚಾಲಕ ಪ್ರೊ. ಲಕ್ಷ್ಮಣ ಮುಳಗುಂದ ನಿರೂಪಣೆ, ರಾಜ್ಯಶಾಸ್ತ್ರ ಪ್ರಾಧ್ಯಾಪಕ ಮತ್ತು ಕ್ರೀಡಾ ಸಂಚಾಲಕ ಮಹಾಂತೇಶ ವಂದನಾರ್ಪಣೆಗೈದರು. ಬೋಧಕರು, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ "ಬಸವರಾಜ.ಕೆ" ಆಯ್ಕೆಯಾಗಿದ್ದಕ್ಕೆ ಅಭಿನಂದನೆಗಳು




**ಹೊಸಪೇಟೆ** : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರಿನ ರಾಜ್ಯಾಧ್ಯಕ್ಷರಾದ ಶ್ರೀ ಎಸ್.ಷಡಾಕ್ಷರಿಯವರು ರಾಜ್ಯ ಸಂಘದ ಬೈಲಾದಲ್ಲಿರುವ ಪ್ರದತ್ತವಾದ ಅಧಿಕಾರದನ್ವಯ "ಬಸವರಾಜ.ಕೆ". ಹಿರಿಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ವಿಜಯನಗರ ಜಿಲ್ಲೆ, ಹೊಸಪೇಟೆ ಇವರನ್ನು ರಾಜ್ಯ ಸಂಘದ "ರಾಜ್ಯ ಸಂಘಟನಾ ಕಾರ್ಯದರ್ಶಿ" ನಾಮನಿರ್ದೇಶನ ಮಾಡಿ ರಾಜ್ಯ ಶಾಖೆಯ ನೌಕರರ ಭವನದ ಕಛೇರಿಯಲ್ಲಿ ಅಭಿನಂಧಿಸಿ, ಸಂಘಟನೆಯನ್ನು ಬಲಿಷ್ಠಗೊಳಿಸಲು ಹಾಗೂ ನೌಕರರ ಏಳಿಗೆಗಾಗಿ ಕ್ರಿಯಾಶೀಲವಾಗಿ ಸ್ಪಂದಿಸಲು ಸೂಚಿಸಿ ಆದೇಶ ಪತ್ರವನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯದ ಸಮಸ್ತ ನೌಕರರಿಗೆ ಆರೋಗ್ಯ ಸಂಜೀವಿನಿ ಜಾರಿಗೆ ತರಲು ಶ್ರಮಿಸಿದ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎಸ್.ಷಡಕ್ಷರಿಯವರನ್ನು ವಿಜಯನಗರ ಜಿಲ್ಲಾ ಶಾಖೆ ವತಿಯಿಂದ ಜಿಲ್ಲಾಧ್ಯಕ್ಷರಾದ ಶ್ರೀ ಜಿ.ಮಲ್ಲಿಕಾರ್ಜುನಗೌಡ ಹಾಗೂ ಪದಾಧಿಕಾರಿಗಳು ಅಭಿನಂಧಿಸಿ ನೂತನ ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾ ಕೆ.ಜಿ.ಐ.ಡಿ. ಕಛೇರಿ, ಜಿಲ್ಲಾ ತರಬೇತಿ ಸಂಸ್ಥೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಛೇರಿ ಆರಂಭಿಸಲು ಸರ್ಕಾರಕ್ಕೆ ಒತ್ತಾಯಿಸಬೇಕೆಂದು ರಾಜ್ಯಾಧ್ಯಕ್ಷರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಗಿರಿಗೌಡ, ರಾಜ್ಯ ಉಪಾಧ್ಯಕ್ಷ ಡಾ.ಸದಾನಂದ ನೆಲಕುದುರಿ, ವಿಜಯನಗರ ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನಗೌಡ, ಉಪಸ್ಥಿತರಿದ್ದರು.

ರಾಜ್ಯ ಶಾಖೆಗೆ ವಿಜಯನಗರ ಜಿಲ್ಲೆ ವತಿಯಿಂದ ಸಂಘಟನ ಕಾರ್ಯದರ್ಶಿಯಾಗಿ ಬಸವರಾಜ.ಕೆ. (ಹೊಸಪೇಟೆ) ಇವರೊಟ್ಟಿಗೆ ಡಾ.ಪಿ.ಮುನಿವಾಸುದೇವರೆಡ್ಡಿ (ಹೊಸಪೇಟೆ) – ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿ, ಕೊಟ್ರಗೌಡ್ರು (ಹಡಗಲಿ) – ರಾಜ್ಯ ಕಾರ್ಯದರ್ಶಿ, ಎಂ.ಪಿ.ಎಂ. ಮಂಜುನಾಥ (ಹಗರಿಬೊಮ್ಮನಹಳ್ಳಿ) – ವಿಭಾಗಿಯ ಉಪಾಧ್ಯಕ್ಷರು, ಜಗದೀಶ್.ಕೆ. (ಕೊಟ್ಟೂರು) – ರಾಜ್ಯ ಪರಿಷತ್ ಸದಸ್ಯರು, ಎಂ.ಪಿ.ಎಂ. ಅಶೋಕ್ (ಹಡಗಲಿ) – ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ನಾಮ ನಿರ್ದೇಶನ ಮಾಡಲಾಯಿತು.

ಜಿಲ್ಲೆಯ ಪದಾಧಿಕಾರಿಗಳನ್ನು ರಾಜ್ಯ ಶಾಖೆಗೆ ನಾಮ ನಿರ್ದೇಶನ ಮಾಡಿದ್ದಕ್ಕಾಗಿ ವಿಜಯನಗರ ಜಿಲ್ಲಾಧ್ಯಕ್ಷರಾದ ಜಿ.ಮಲ್ಲಿಕಾರ್ಜುನಗೌಡ, ಜಿಲ್ಲಾ ಖಜಾಂಚಿ ಕೆ.ಮಲ್ಲೇಶಪ್ಪ, ರಾಜ್ಯ ಪರಿಷತ್ ಸದಸ್ಯ ರಾಘವೇಂದ್ರ ಹೆಗಡಿಯಾಳ್, ಜಿಲ್ಲಾ ಕಾರ್ಯದರ್ಶಿ ಟಿ.ಪಂಪಣ್ಣ ಸೇರಿದಂತೆ ನೌಕರರ ಸಂಘದ ಜಿಲ್ಲಾ ಹಾಗೂ ತಾಲೂಕುಗಳ ಪದಾಧಿಕಾರಿಗಳು, ಜಿಲ್ಲೆಯ ಸರ್ಕಾರಿ ನೌಕರರು ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಗೂ ಶಿಕ್ಷಕರು ಅಭಿನಂಧಿಸಿ ಶುಭಕೋರಿದ್ದಾರೆ.

# ಮಹರ್ಷಿ ವಾಲ್ಮೀಕಿ ಆದರ್ಶ ಅತ್ಯಂತ ಮೌಲಿಕ ಮಾದರಿ ಸಂದೇಶ

**ಹಾನಗಲ್**: ಬದುಕಿನ ಪರಿವರ್ತನೆಯಿಂದ ಮನುಷ್ಯ ಭವಿಷ್ಯದಲ್ಲಿ ವಿಶ್ವ ಮಾದರಿಯಾಗಿರುವುದಕ್ಕೆ ಮಹರ್ಷಿ ವಾಲ್ಮೀಕಿ ಆದರ್ಶ ಅತ್ಯಂತ ಮೌಲಿಕ ಮಾದರಿ ಸಂದೇಶ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು ಇಲ್ಲಿನ ಡಾ.ಬಾಬು ಜಗಜೀವನರಾಮ್ ಭವನದಲ್ಲಿ ತಾಲೂಕಾಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಪುರಸಭೆ, ಮಹರ್ಷಿ ವಾಲ್ಮೀಕಿ ನಾಯಕ ಸಂಘ ಸಂಯುಕ್ತವಾಗಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು. ತ್ಯಾಗದಲ್ಲಿ ಶ್ರೀರಾಮ ಪರಮೋಚ್ಚ ಆದರ್ಶ. ಅಂತಹ ರಾಮಾಯಣ ದರ್ಶನವನ್ನು ಜೀವಂತಗೊಳಿಸಿದ ವಾಲ್ಮೀಕಿ ಸತ್ಯದ ಹಾದಿಗಳನ್ನು ಹೇಳಿದ್ದಾನೆ. ವಾಲ್ಮೀಕಿ ರಾಮಾಯಣದ ಪ್ರತಿ ಪಾತ್ರಗಳು ಒಂದೊಂದು ಜೀವನಾದರ್ಶಗಳು. ಇಲ್ಲಿ ಎಲ್ಲೂ ಜಾತಿಯ ವಾಸನೆಯೇ ಇಲ್ಲ. ಪ್ರೀತಿ ವಿಶ್ವಾಸದ ಬದುಕಿನ ಸಂದೇಶ ಇಲ್ಲಿವೆ. ಅಧಿಕಾರ ರಾಜಕೀಯಕ್ಕಾಗಿ ಧರ್ಮ ಬಳಿಸಿಕೊಳ್ಳುವ ದುಸ್ಸಾಹಸ ಬೇಡ. ಅಧಿಕಾರಕ್ಕಾಗಿ ಏನೆಲ್ಲ ಅಲ್ಲೋಲ ಕಲ್ಲೋಲ ಆಗಿವೆ. ಚುನಾವಣೆ ಬಂದಾಗ ಆದರ್ಶ ಮಾಯವಾಗುತ್ತವೆ. ದ್ವೇಷ, ಅಸೂಹೆ ಬಿಡೋಣ. ಒಳ್ಳೆಯ ನಾಡು ಕಟ್ಟೋಣ.




ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿಯಲ್ಲಿ ಯಾವುದೇ ಅನಾನುಕೂಲ ಆಗದಂತೆ ಕಾಳಜಿ ವಹಿಸುತ್ತೇವೆ ಎಂದರು. ತಹಶೀಲ್ದಾರ್ ರೇಣುಕಾ ಎಸ್ ಹಾಗೂ ಬಹರ್‌ಹುಕುಂ ಸಮಿತಿ ಅಧ್ಯಕ್ಷ ಪುಟ್ಟಪ್ಪ ನರೇಗಲ್ ಮಾತನಾಡಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಪುರಸಭೆ ಉಪಾಧ್ಯಕ್ಷೆ ವೀಣಾ ಗುಡಿ, ತಾಲೂಕಾ ಮಹರ್ಷಿ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ಪರಶುರಾಮ ಮುನಿಯಣ್ಣನವರ, ತಾಲೂಕಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗುರುನಾಥ ಗವಾಣಿಕರ, ಹೊನ್ನಪ್ಪ ಭೋವಿ, ಭರಮಣ್ಣ ಶಿವೂರ, ಮಾರ್ಕಂಡಪ್ಪ ಮಣ್ಣಮ್ಮನವರ, ಮಂಜು ಗೊರಣ್ಣನವರ, ಶಿವು ತಳವಾರ, ರಾಮಣ್ಣ ಲಕಮಾಪುರ, ಎಚ್.ಎಂ.ಓಲೇಕಾರ, ಶಿವಾನಂದ ಕನ್ನಕ್ಕನವರ, ಮಹಾಲಿಂಗಪ್ಪ ಬಿದರಮಳಿ, ರಾಮಣ್ಣ ಮಡ್ಲೂರ, ರೇಖಾ ಕರಭೀಮಣ್ಣನವರ, ಶೀಲಾ ಭದ್ರಾವತಿ ಇದ್ದರು.ಬಾಲಚಂದ್ರ ಅಂಬಿಗೇರ, ಎಚ್.ನಾಗರಾಜ ಪ್ರಾರ್ಥನೆ ಹಾಡಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಗಂಗಮ್ಮ ಹಿರೇಮಠ ಸ್ವಾಗತಿಸಿದರು. ಸಿದ್ದು ಗೌರಣ್ಣನವರ ಕಾರ್ಯಕ್ರಮ ನಿರೂಪಿಸಿದರು.

# ಚಿಕ್ಕಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿ ಅಮಾನತ್ತು

**ಹಾಸನ** : ಅರಕಲಗೂಡು ತಾಲ್ಲೂಕಿನ ಚಿಕ್ಕಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಪಿ. ಮನು ಇವರು ಮಹೇಶ್ ಕೆ.ಕೆ. ಕೋನಾಪುರ ಗ್ರಾಮ, ಅರಕಲಗೂಡು ತಾಲ್ಲೂಕು ಇವರ ನಿವೇಶನ ಖಾತೆ ಸಂಖ್ಯೆ:52 ಮತ್ತು 206 ಕ್ಕೆ ಸಂಬಂಧಿಸಿದಂತೆ ಇ–ಸ್ವತ್ತು ವಿತರಣೆ ಮಾಡಲು ಹಣ ಪಡೆದಿರುವ ಮತ್ತು ಹೆಚ್ಚುವರಿ ಹಣಕ್ಕೆ ಬೇಡಿಕೆ ಇಟ್ಟಿರುವ ಸುದ್ದಿಯು ದಿನ ಪತ್ರಿಕೆಯಲ್ಲಿ ಸುದ್ದಿ ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾಗಿರುವ ಹಿನ್ನಲೆಯಲ್ಲಿ ಹಾಗೂ 15ನೇ ಹಣಕಾಸು

ಯೋಜನೆಯ ಅನುದಾನ ಮತ್ತು ನಿಧಿ–1, ನಿಧಿ–2 ರ ಅನುದಾನವನ್ನು ನಿಯಮ ಬಾಹಿರವಾಗಿ ವೆಚ್ಚ ಮಾಡಿರುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಅರಕಲಗೂಡು ಇವರು ತನಿಖೆ ನಡೆಸಿ ಸಲ್ಲಿಸಿರುವ ತನಿಖಾ ವರದಿಯನ್ವಯ ಇವರ ಮೇಲಿನ ಆರೋಪಗಳ ಕುರಿತು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸಿ.ಪಿ. ಮನು, ಪಂಚಾಯಿತಿ

ಅಭಿವೃದ್ಧಿ ಅಧಿಕಾರಿ, ಚಿಕ್ಕಹಳ್ಳಿ ಗ್ರಾಮ ಪಂಚಾಯಿತಿ ಇವರನ್ನು ಅ.06 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ ಅವರು ತಿಳಿಸಿದ್ದಾರೆ.

## ನಿಧನ ಸುದ್ಧಿಗಳು

### ಕೋಲ್ಕುಂಟೆ ಹನುಮಂತಪ್ಪ ನಿಧನ

**ಮಲೇಬೆನ್ನೂರು:** ಸಮೀಪದ ಹಿರೇಹಾಲಿವಾಣದ ನಿವಾಸಿ ಕೋಲ್ಕುಂಟೆ ಹನುಮಂತಪ್ಪ (72) ಮಂಗಳವಾರ ನಿಧನರಾದರು. ಮೃತರಿಗೆ ಪತ್ನಿ ಇದ್ದಾರೆ. ಸಂಜೆ ಅಂತ್ಯಕ್ರಿಯೆ ನಡೆಯಿತು.

### ಚೌಡಮ್ಮ ನಿಧನ

**ದಾವಣಗೆರೆ:** ತಾಲ್ಲೂಕಿನ ಕಕ್ಕರಗೊಳ್ಳ ಕೋಡಿಹಳ್ಳಿಯ ನಿವಾಸಿ ಚೌಡಮ್ಮ (94) ಮಂಗಳವಾರ ನಿಧನರಾದರು.ಇವರಿಗೆ 9 ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಬುಧವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ

### ಎಸ್.ಟಿ. ಸ್ವಾಮಿ (ರುದ್ರಪ್ಪ) ನಿಧನ

**ದಾವಣಗೆರೆ** : ಸಿಟಿ ಪಿಸಾಳೆ ಕಾಂಪೌಂಡ್, 3ನೇ ಕ್ರಾಸ್ ವಾಸಿ ಎಸ್.ಟಿ. ಸ್ವಾಮಿ (ರುದ್ರಪ್ಪ) (76) ಇವರು ದಿನಾಂಕ 07.10.20250 ಮಂಗಳವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು ಅಳಿಯಂದಿರು, ಮೊಮ್ಮಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.10.2025ರ ಬುಧವಾರ ಬೆಳಿಗ್ಗೆ 11.30ಕ್ಕೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿದೆ.

### ಸೋಮಲಾಪುರ ಮಠದ ವೀರಯ್ಯ ನಿಧನ

**ದಾವಣಗೆರೆ** : ಸಿದ್ದವೀರಪ್ಪ ಬಡಾವಣೆ 9ನೇ ಕ್ರಾಸ್ ವಾಸಿ ಎಂ. ವೀರಯ್ಯ (97) (ನಿ. ಮುಖ್ಯೋಪಾಧ್ಯಾಯರು) ಇವರು ದಿನಾಂಕ : 07.10.2025ರ ಮಂಗಳವಾರ ಸಂಜೆ 5.45ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 08.10.2025ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

### ನಾಗಮ್ಮ ನಿಧನ

**ದಾವಣಗೆರೆ:** ನಗರದ ಡಿಸಿಎಂ ಟೌನ್‌ಶಿಪ್ ನಿವಾಸಿ ನಾಗಮ್ಮ (87) ಮಂಗಳವಾರ ನಿಧನರಾದರು. ಅವರಿಗೆ ಮೂವರು ಪುತ್ರರು ಇದ್ದಾರೆ. ಸ್ವಗ್ರಾಮ ಜಗಳೂರು ತಾಲೂಕಿನ ಪಲ್ಲಾಗಟ್ಟಿ ಗ್ರಾಮದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಿತು.

# ವೈದ್ಯರೊಬ್ಬರ ಆಧಾರ್ ಸಂಖ್ಯೆಯಲ್ಲಿ ಅನ್ಯಕೋಮಿನ ಹೆಸರುಗಳು ಜನಗಣತಿ ಸಾಫ್ಟವೇರ್ ನಲ್ಲಿ ಸಮಸ್ಯೆ, ಸಿಬ್ಬಂದಿಗಳು ಕಂಗಾಲು

**ದಾವಣಗೆರೆ:** ಜಾತಿ ಜನಗಣತಿ ವೇಳೆ ವೈದ್ಯರೊಬ್ಬರ ಆಧಾರ್ ನಂಬರ್ ನಮೂದಿಸುತ್ತಿದ್ದಂತೆ ಕುಟುಂಬ ಸದಸ್ಯರ ಕಾಲಂ ನಲ್ಲಿ ಅನ್ಯಕೋಮಿನ ಹೆಸರುಗಳು ಸೇರ್ಪಡೆಯಾದ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ.

ನಗರದ ಎಂಸಿಸಿ ಬಿ–ಬ್ಲಾಕ್‌ನಲ್ಲಿ ಡಾ.ಹರ್ಷ ಎಂಬುವರ ಮನೆಗೆ ಜಾತಿ ಜನಗಣತಿಗೆಂದು ಸಮೀಕ್ಷಾ ಸಿಬ್ಬಂದಿ ಭೇಟಿ ನೀಡಿದ್ದ ವೇಳೆ ಇಂತಹದ್ದೊಂದು ಎಡವಟ್ಟು ಆಗಿದೆ. ಗಣತಿ ಆಪ್ ನಲ್ಲಿ ಡಾ.ಹರ್ಷ ಆಧಾರ್ ಕಾರ್ಡ್ ನಂಬರ್ ನಮೂದಿಸುತ್ತಿದ್ದಂತೆಯೇ ಕುಟುಂಬ ಸದಸ್ಯರ ಕಾಲಂ ನಲ್ಲಿ ಅಫ್ರೋಜಾ, ಷರೀಫ್ ಬಾನು ಹೆಸರುಗಳು ಸೇರ್ಪಡೆಯಾಗಿದ್ದು ಗೊಂದಲಕ್ಕೆ ಕಾರಣವಾಯಿತು. ಇದರಿಂದ ಆತಂಕಗೊಂಡ ಗಣತಿ ಸಿಬ್ಬಂದಿ ಏನು ಮಾಡಬೇಕೆಂದು ತೋಚದೆ ತಡಬಡಾಯಿಸಿದ್ದಾರೆ. ನಂತರ ಈ ವಿಚಾರವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು, ಡಾ.ಹರ್ಷ ಮನೆಯ ಸದಸ್ಯರ ಒಂದೊಂದೇ ಹೆಸರನ್ನು ಗಣತಿ ಸಿಬ್ಬಂದಿ ನಮೂದಿಸಿಕೊಂಡಿದ್ದಾರೆ.

ತಮ್ಮ ಹಾಗೂ ಕುಟುಂಬದ ಹೆಸರಿನ ಬದಲಿಗೆ ಮುಸ್ಲಿಂ ಕುಟುಂಬವೊಂದರ ಹೆಸರು ಬಂದ ವಿಚಾರವನ್ನು ತಕ್ಷಣವೇ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಗಮನಕ್ಕೆ ಡಾ.ಹರ್ಷ ತಂದಿದ್ದಾರೆ. ಅಹವಾಲು ಆಲಿಸಿದ ಜಿಲ್ಲಾಧಿಕಾರಿಗಳು, ಬೇರೆ ಮುಸ್ಲಿಂ ಕುಟುಂಬದ ಹೆಸರು ದಾಖಲಾಗಿರುವುದನ್ನು ಅಳಿಸಿ ಹಾಕುವುದಾಗಿ ಭರವಸೆ ನೀಡಿದ್ದಾರೆ. ಜಾತಿ ಜನಗಣತಿ ಸಾಫ್ಟವೇರ್ ನಲ್ಲಿ ಆಗಿರುವ ಸಮಸ್ಯೆ ಪರಿಹರಿಸುತ್ತೇವೆಂದು ಡಾ.ಹರ್ಷ ಅವರಿಗೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಭರವಸೆ ನೀಡಿದ ನಂತರವಷ್ಟೇ ವೈದ್ಯರ ಕುಟುಂಬ ಸಮಾಧಾನಗೊಂಡಿದ್ದು, ಗಣತಿ ಸಿಬ್ಬಂದಿ ಸಹ ನಿರಮ್ಮಳರಾಗಿದ್ದಾರೆ.

# ಸಮೀಕ್ಷೆ ಕರ್ತವ್ಯದಲ್ಲಿದ್ದ ಶಿಕ್ಷಕನಿಗೆ ಹೃದಯಾಘಾತ, ಚಿಕಿತ್ಸೆಗೆ ಜಿಲ್ಲಾಧಿಕಾರಿ ಅಭಯ

**ದಾವಣಗೆರೆ:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಕೈಗೊಂಡಿರುವ ಜಾತಿ ಜನಗಣತಿ ಸಮೀಕ್ಷೆ ವೇಳೆ ಕರ್ತವ್ಯದಲ್ಲಿದ್ದ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ಹೃದಯಾಘಾತಕ್ಕೊಳಗಾದ ಘಟನೆ ತಾಲೂಕಿನ ಹಳೆ ಕಡ್ಲೆಬಾಳು ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ವರದಿಯಾಗಿದೆ.

ಗ್ರಾಮದ ಸರ್ಕಾರಿ ಶಾಲೆಯ ಸಹಶಿಕ್ಷಕ ಶಿವಪ್ರಕಾಶ ನಾಯ್ಕ(44 ವರ್ಷ) ಹೃದಯಾಘಾತಕ್ಕೆ ಒಳಗಾದವರು. ಹಳೆ ಕಡ್ಲೇಬಾಳು ಗ್ರಾಮದಲ್ಲಿ ಜಾತಿ ಗಣತಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ದಿಢೀರನೇ ಹೃದಯಾಘಾತವಾಗಿ ಶಿವಪ್ರಕಾಶ ನಾಯ್ಕ ಕುಸಿದು ಬಿದ್ದಿದ್ದಾರೆ. ತಕ್ಷಣವೇ ಗ್ರಾಮಸ್ಥರು, ಸ್ಥಳೀಯರು ವಾಹನವೊಂದರಲ್ಲಿ ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ಕರೆ ತಂದು, ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಹೃದ್ರೋಗ ತಜ್ಞರು ಶಿಕ್ಷಕ ಶಿವಪ್ರಕಾಶ ನಾಯ್ಕಗೆ ಶಸ್ತ್ರಚಿಕಿತ್ಸೆ ಮಾಡಿ, ಸ್ಟಂಟ್ ಹಾಕಿದ್ದು, ಸಧ್ಯ ಶಿಕ್ಷಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶಸ್ತ್ರಚಿಕಿತ್ಸೆ ನಂತರ ಎಚ್ಚರಗೊಂಡ ಶಿಕ್ಷಕ ಶಿವಪ್ರಕಾಶ ನಾಯ್ಕಗೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಮೊಬೈಲ್ ಕರೆ ಮಾಡಿ, ಧೈರ್ಯ ತುಂಬಿದ್ದಾರೆ.

ಸಮೀಕ್ಷೆ ವೇಳೆ ಆರ್.ಆರ್ ನಂಬರ್ ಸಮಸ್ಯೆ, ಲೊಕೇಷನ್ ಗೊಂದಲ, ನೆಟವರ್ಕ್, ಸರ್ವರ್ ಹೀಗೆ ಹಲವಾರು ಸಮಸ್ಯೆಗಳ ಕಾರಣ, ಆರಂಭದಿಂದಲೂ ಅಧಿಕಾರಿ, ಸಿಬ್ಬಂದಿ ತೀವ್ರ ಒತ್ತಡ, ಭಯದಲ್ಲೇ ಕಾರ್ಯ ನಿರ್ವಹಿಸುವ ಸ್ಥಿತಿ ಇದೆ. ಇಂತಿಷ್ಟು ಕುಟುಂಬಗಳದ್ದು ಸಮೀಕ್ಷೆ ಮಾಡಲೇಬೇಕೆಂಬ ಮೇಲಾಧಿಕಾರಿಗಳ ಫರ್ಮಾನು, ಅಮಾನತು, ಶಿಸ್ತು ಕ್ರಮದ ಬೆದರಿಕೆಗಳು ಸಾಮಾನ್ಯವಾಗಿವೆ.

# ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಪ್ರಸ್ತಾವನೆ: ಜಿಲ್ಲಾಧಿಕಾರಿ

**ದಾವಣಗೆರೆ:** ಜಾತಿ ಜನಗಣತಿ ಸಮೀಕ್ಷೆ ವೇಳೆ ಹೃದಯಾಘಾತಕ್ಕೀಡಾಗಿ, ಶಸ್ತ್ರಚಿಕಿತ್ಸೆಗೆ ಒಳಗಾದ ತಾಲೂಕಿನ ಹಳೆ ಕಡ್ಲೇಬಾಳು ಗ್ರಾಮದ ಶಾಲಾ ಶಿಕ್ಷಕ ಶಿವಪ್ರಕಾಶ ನಾಯ್ಕ ಚಿಕಿತ್ಸಾ ವೆಚ್ಚ ಭರಿಸುವಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಸಮೀಕ್ಷೆಗೆ ತೆರಳಿದ್ದ ವೇಳೆ ರಾಜ್ಯದ ವಿವಿಧೆಡೆ ಮೃತಪಟ್ಟ ಮೂವರ ಕುಟುಂಬ ವರ್ಗಕ್ಕೆ ತಲಾ 15 ಲಕ್ಷ ರೂ. ಪರಿಹಾರವನ್ನು ಆಯೋಗದಿಂದ ನೀಡಲಾಗುತ್ತಿದೆ. ಅಲ್ಲದೇ. ಗಣತಿ ಕಾರ್ಯದ ವೇಳೆ ಹೃದಯಾಘಾತ, ನಾಯಿ ಕಡಿತ ಕೇಸ್ ಗಳು ವರದಿಯಾಗುತ್ತಿರುವ ಬಗ್ಗೆಯೂ ಅ.8ರಂದು ಆಯೋಗದ ಸದಸ್ಯರು ಸಭೆ ಸೇರಿ, ಚರ್ಚಿಸುವ ಭರವಸೆ ನೀಡಿದ್ದಾರೆ. ಹಳೆ ಕಡ್ಲೆಬಾಳು ಗ್ರಾಮದ ಶಿಕ್ಷಕನಿಗೆ ಹೃದಯಾಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕಿತ್ಸಾ ವೆಚ್ಚ ಭರಿಸುವಂತೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಅವರು ಮಾಹಿತಿ ನೀಡಿದ್ದಾರೆ.


# ಕುಣಿಗಲ್ : ಬೈಕ್‌ಗೆ ಟಿಪ್ಪರ್ ಲಾರಿ ಡಿಕ್ಕಿಯಾಗಿ ಮೂವರ ಸಾವು

**ಕುಣಿಗಲ್:** ಬೈಕ್‌ಗೆ ಟಿಪ್ಪರ್ ಲಾರಿ ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಹುಲಿಯೂರುದುರ್ಗ ಹೋಬಳಿ ಸುಗ್ಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಅಮೃತ್ತೂರು ಹೋಬಳಿ ಉಂಗ್ರ ಗ್ರಾಮದ ಹುಚ್ಚೆಗೌಡ (55), ಮೊಮಗ ಪ್ರೀತಮ್ ಗೌಡ (10) ವೃದ್ಧೆ ಲಿಂಗಮ ಸ್ಥಳದಲ್ಲೇ ಮೃತಪಟ್ಟ ದುರ್ದೈವಿಗಳು.ಹುಚ್ಚೇಗೌಡ ಹಾಗೂ ಆತನ ಮಗಳ ಮಗ ಪ್ರೀತಮ್ ಗೌಡ, ಇದೇ ಗ್ರಾಮದ ಲಿಂಗಮ ಬೈಕ್‌ನಲ್ಲಿ ಉಂಗ್ರ ಗ್ರಾಮದಿಂದ ಹುಲಿಯೂರುದುರ್ಗಕ್ಕೆ ಹೋಗುತ್ತಿದ್ದ ವೇಳೆ ಹುಲಿಯೂರುದುರ್ಗ ಕಡೆಯಿಂದ ಯಡವಾಣಿ ಕಡೆಗೆ ಹೋಗುತ್ತಿದ್ದ ಟಿಪ್ಪರ್ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಈ ಅವಘಡ ಸಂಭವಿಸಿದೆ. ಹುಲಿಯೂರುದುರ್ಗ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ.

# ಮಹರ್ಷಿ ವಾಲ್ಮೀಕಿ ಮಹಾ ಶ್ರೇಷ್ಠ ಕವಿ : ಸಂಸದ ಶ್ರೇಯಸ್ ಎಂ ಪಟೇಲ್

**ಹಾಸನ :** ಮಹರ್ಷಿ ವಾಲ್ಮೀಕಿಯವರು ಮಹಾ ಶ್ರೇಷ್ಠ ಕವಿ,ಇವರು ರಚಿಸಿದ ರಾಮಾಯಣ ಮಹಾಕಾವ್ಯ ಕೇವಲ ಒಂದು ಕಾವ್ಯ ಅಥವಾ ಗ್ರಂಥ ಅಷ್ಟೇ ಅಲ್ಲ, ಧರ್ಮ, ಸತ್ಯ, ನಿಷ್ಠೆಯಿಂದ ಕೂಡಿರುವ ಕಥೆಯಾಗಿದೆ ಎಂದು ಸಂಸದರಾದ ಶ್ರೇಯಸ್ ಎಂ ಪಟೇಲ್ ಅವರು ತಿಳಿಸಿದ್ದಾರೆ.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾ ನಗರ ಪಾಲಿಕೆ ಸಹಯೋಗದಲ್ಲಿ ಇಂದು ನಗರದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿಂದು ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಮಾರ್ಪಟ್ಟು, ಯಾವ ರೀತಿಯಲ್ಲಿ ಸಾಧನೆ ಮಾಡಬಹುದು ಎಂಬುದಕ್ಕೆ ನೈಜ ಉದಾಹರಣೆ ಮಹರ್ಷಿ ವಾಲ್ಮೀಕಿಯವರು ಎಂದು ತಿಳಿಸಿದರು.

ರಾಮಾಯಣದಂತಹ ಕೃತಿಯನ್ನು ಮಹರ್ಷಿ ವಾಲ್ಮೀಕಿ ಅವರು ರಚಿಸಿರುವುದು ಹೆಮ್ಮೆಯ ವಿಷಯ ಅವರು ಹಾಕಿಕೊಟ್ಟಿರುವ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು ಎಂದು ತಿಳಿಸಿದರು.

ಎಲ್ಲರಿಗೂ ಎಲ್ಲಾ ರೀತಿಯ ಹಕ್ಕುಗಳು ಸಿಗಬೇಕೆಂಬುದು ಅವರ ಆಶಯವಾಗಿತ್ತು ಆ ನಿಟ್ಟಿನಲ್ಲಿ ಅವರು ಬರೆದಿರುವ ಶ್ಲೋಕಗಳು ಆದರ್ಶಗಳನ್ನು ಹಾಗೂ ಅವರು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ನಡೆದು, ನಮ್ಮ ಮುಂದಿನ ಪೀಳಿಗೆಗೂ ತಿಳಿ ಹೇಳುವ ಕೆಲಸವನ್ನು ಮಾಡಬೇಕು. ಅದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಮಾಜಿ ಸಚಿವರಾದ ರಾಜಣ್ಣರವರ ಅಧ್ಯಕ್ಷತೆಯಲ್ಲಿ ಈ ಹಿಂದೆ ಸಭೆ ನಡೆಸಿ ವಾಲ್ಮೀಕಿ ಸಮಾಜದವರ ಅಭಿವೃದ್ಧಿಗಾಗಿ 10 ಗುಂಟೆ ಜಾಗವನ್ನು ಮಂಜೂರು ಮಾಡಲಾಗಿತ್ತು. ಆ ಸ್ಥಳದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳು ಸೇರಿ ಸಮುದಾಯ ಭವನವನ್ನು ನಿರ್ಮಾಣ ಮಾಡುವುದಕ್ಕೆ ಆರಂಭಿಸುತ್ತೇವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ ವಾಲ್ಮೀಕಿ ಮಹರ್ಷಿಯವರು ಆದಿ ಕವಿ, ಜಗತ್ತಿನ ಮೊದಲ ಕವಿ, ರಾಮಾಯಣವನ್ನು ರಚಿಸಿ ಜಗತ್ತಿಗೆ ಉಡುಗೊರೆಯನ್ನು ನೀಡಿದ ಇವರು ಅಸಾಮಾ ನ್ಯರು. ಮನುಷ್ಯರಲ್ಲಿಯೇ ಅತ್ಯುತ್ತಮವಾದ ಮನುಷ್ಯ ಶ್ರೀ ರಾಮ ಅಂತಹ ಮಹಾತ್ಮರ ಕುರಿತಾಗಿ ಬರೆದು, ಅವರ ಜೀವನವನ್ನು ಪ್ರತಿಯೊಬ್ಬರು ಅನುಸರಿಸುವಂತೆ ಮಾಡಿದವರಾಗಿದ್ದಾರೆ ಎಂದು ತಿಳಿಸಿದರು.

ರಾಮಾಯಣ ರಚನೆಯಾಗಿ ರುವ ಕಾಲದ ಕುರಿತು ಎಲ್ಲಿಯೂ ನಿಖರವಾದ ಮಾಹಿತಿ ಇಲ್ಲ, ಆದರೆ ಆ ಗ್ರಂಥ ಇಂದಿಗೂ ಪ್ರಸ್ತುತವಾಗಿದೆ. ಇಂದಿಗೂ ನಮ್ಮ ಸಮಾಜದ ಜನರಿಗೆ ಸಂದೇಶವನ್ನು ನೀಡುತ್ತಿದೆ. ಈ ಕೃತಿಯಲ್ಲಿ ಅಖಂಡ ಭಾರತದ ಚಿತ್ರಣವನ್ನೇ ಕೊಟ್ಟಿದ್ದಾರೆ. ಒಬ್ಬ ಅಬಲೆ ಮಹಿಳೆ ನಿಶ್ಚಿಂತೆಯಾಗಿ ವಾಲ್ಮೀಕಿ ಅವರ ಆಶ್ರಮದಲ್ಲಿ ಜೀವನ ಮಾಡಬಹುದುದಾಗಿತ್ತು ಎಂದರು.

ಶ್ರೀ ರಾಮಾಯಣ ದರ್ಶನವನ್ನು ಕುವೆಂಪು ಅವರು ಬರೆದರೆ, ತುಳಿಸಿದಾಸರು ತುಳಸಿ ರಾಮಾಯಣ ಬರೆದಿದ್ದಾರೆ ಹೀಗೆ ಪ್ರತಿಯೊಬ್ಬರು ಅನೇಕ ಭಾಷೆಗಳಲ್ಲಿ ಹೊಸ ಹೊಸ ರೂಪಗಳನ್ನು ನೀಡಿ ರಾಮಾಯಣವನ್ನು ಬರೆದಿದ್ದಾರೆ. ಪ್ರತಿಯೊಬ್ಬರೂ ಕಥೆಯನ್ನು ಹೇಳುವ ರೀತಿ ಬೇರೆ ಇರುತ್ತದೆಯಷ್ಟೆ ಆದರೆ ಆ ರಾಮಾಯಣದ ಕಥೆ ಇಂದಿಗೂ ಪ್ರಸ್ತುತವಾಗಿದೆ ಎಂದು ತಿಳಿಸಿದರು.

ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಟೇಲ್ ಶಿವಪ್ಪ ಅವರು ಮಾತನಾಡಿ ಕಾಡಿನಲ್ಲಿ ವಾಸ ಮಾಡುತ್ತಿದ್ದಂತಹ ತಳ ವರ್ಗದ ಜನರನ್ನು ಮೇಲೆತ್ತಲು ಶ್ರಮಿಸಿ ದಂತಹ ಮಹಾನ್ ವ್ಯಕ್ತಿ ಮಹರ್ಷಿ ವಾಲ್ಮೀಕಿಯವರಾಗಿದ್ದಾರೆ. ಇಂದು ನಾವೆಲ್ಲರೂ ಶ್ರೀರಾಮನನ್ನು ನೆನೆಸುವಂತೆ, ಅವರ ಆದರ್ಶವನ್ನು ಪಾಲಿಸುವಂತೆ ರಾಮಾಯಣ ಪುಸ್ತಕದಲ್ಲಿ ರಾಮನ ಕುರಿತಾಗಿ ತಿಳಿಸಿಕೊಟ್ಟಿರುವ ಮಹಾನ್ ವ್ಯಕ್ತಿ ಎಂದು ತಿಳಿಸಿದ್ದಾರೆ.

ಶೂದ್ರ ವರ್ಗದವರು ಮಾಡಿದ ಸಾಧನೆಯನ್ನು ಸಹಿಸುವುದಕ್ಕೆ ಸಾಧ್ಯವಾಗದೆ ಕೆಲವರು ಕಟ್ಟುಕಥೆಯನ್ನು ಇವರ ಕುರಿತಾಗಿ ಕಟ್ಟಿದ್ದಾರೆ ಅದನ್ನು ನಾವು ನಕಾರಾತ್ಮಕವಾಗಿ ತೆಗೆದುಕೊಳ್ಳಬಾರದು ಎಂದರಲ್ಲದೆ, ಮಾಜಿ ಸಚಿವರಾದ ರಾಜಣ್ಣ ಅವರು ಈ ಹಿಂದೆ ನೀಡಿರುವ ಸ್ಥಳದಲ್ಲಿ ಸಮುದಾಯದವರ ಅನುಕೂಲಕ್ಕಾಗಿ ಉತ್ತಮವಾದ ಭವನವನ್ನು ಕಟ್ಟಿಸಿ ಕೊಡುವ ನಿಟ್ಟಿನಲ್ಲಿ ಸಂಸದರ ಜೊತೆಗೂಡಿ ಕೈಜೋಡಿಸುತ್ತೇನೆ ಎಂದು ತಿಳಿಸಿದರಲ್ಲದೆ ಸಮುದಾಯದ ಜನರು ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಬೇಕು ಎಂದರು.

ಪ್ರಗತಿಪರ ಚಿಂತಕರಾದ ನಾಗೇಂದ್ರ ಅರಕಲವಾಡಿ ಅವರು ಮುಖ್ಯ ಭಾಷಣ ಮಾಡಿ ಮಾತನಾಡಿ ಮಹರ್ಷಿ ವಾಲ್ಮೀಕಿ ಅವರು ಮೂಲತಃ ಬೇಡರ ಜಾತಿಯಲ್ಲಿ ಜನಿಸಿ 24 ಸಾವಿರ ಶ್ಲೋಕ, 4 ಲಕ್ಷದ 80 ಸಾವಿರದ ಎರಡು ಪದ, 7 ಖಂಡಗಳನ್ನೂ ಒಳಗೊಂಡ ರಾಮಾಯಣ ರಚಿಸಿದ್ದಾರೆ. ಈ ಪುಸ್ತಕ ಭಾರತೀಯ ಸಂಸ್ಕೃತಿ, ಸಾಹಿತ್ಯ, ಧಾರ್ಮಿಕ ಕ್ಷೇತ್ರಕ್ಕೆ ನೀಡಿರುವ ದೊಡ್ಡ ಕೊಡುಗೆ ಆಗಿದೆ ಎಂದು ತಿಳಿಸಿದರು.

ರಾಮಾಯಣ ಕಾವ್ಯದಲ್ಲಿ ಸಮಾಜಕ್ಕೆ, ಕುಟುಂಬಕ್ಕೆ ಬೇಕಾದ ಪಾತ್ರಗಳನ್ನು ನಿರ್ಮಾಣ ಮಾಡಿದ್ದಾರೆ. ಪ್ರತಿಯೊಂದು ಪಾತ್ರವು ಇಂದಿನ ಪ್ರಸ್ತುತತೆಗೆ ಹೋಲುವ ರೀತಿಯಲ್ಲಿಯೇ ರಚಿಸಿದ್ದಾರೆ. ಪ್ರತಿಯೊಂದು ಶ್ಲೋಕಗಳು ದೊಡ್ಡ ದೊಡ್ಡ ನಿಘಂಟುಗಳಾಗಿವೆ ಎಂದರು.

ಪ್ರತಿಭೆ ಯಾರ ಮನೆಯ ಸೊತ್ತು ಅಲ್ಲ ಇದಕ್ಕೆ ಉದಾಹರಣೆ ಮಹರ್ಷಿ ಅವರು. ತಾವು ಕಾಡಲ್ಲಿ ಇದ್ದು ರಾಮಾಯಣ ಬರೆದು ಪ್ರಸಿದ್ಧಿ ಆಗಿದ್ದಾರೆ. ಇದಕ್ಕೆ ಕಾರಣ ಅವರಲ್ಲಿದ್ದ ಅರಿವು, ಜ್ಞಾನ ಹಾಗಾಗಿ ನಾವುಗಳು ಶಿಕ್ಷಣದ ಮೂಲಕ ಮತ್ತು ಇಂತಹ ಜಯಂತಿಗಳ ಮೂಲಕ ಜನರಿಗೆ ಅರಿವು ನೀಡಬೇಕು. ವಾಲ್ಮೀಕಿ ಅವರು ಬರೆದ ರಾಮಾಯಣ ಪುಸ್ತಕವನ್ನು ಆದರ್ಶವಾಗಿಟ್ಟುಕೊಂಡು ಅವರ ಹಾದಿಯಲ್ಲಿ ಸಾಗಬೇಕು ಎಂದು ಮಹರ್ಷಿವಾಲ್ಮೀಕಿ ಅವರ ಕುರಿತು ಸವಿವರವಾಗಿ ಉಪನ್ಯಾಸ ನೀಡಿದರು.


ಇದೇ ಸಂದರ್ಭದಲ್ಲಿ ಸಮುದಾಯದ ಮುಖಂಡರು ಮತ್ತು ಸಮುದಾಯದಲ್ಲಿ ಶೈಕ್ಷಣಿಕವಾಗಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಯನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್ ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ದೂದ್ ಪೀರ್ ಉಪಸ್ಥಿತರಿದ್ದರು.

ಸಮುದಾಯದ ಮುಖಂಡರು, ಸಾರ್ವಜನಿಕರು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸೀಗೆ ಹುಣ್ಣಿಮೆಯ ಸಂಭ್ರಮಾಚರಣೆ

**ಹೊನ್ನಾಳಿ :** ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ವಿಶೇಷವಾಗಿ ಆಚರಿಸುವ ಸೀಗೆ ಹುಣ್ಣಿಮೆ ಹಬ್ಬವನ್ನು ರೈತರು ತಮ್ಮ ಹೋಲಗದ್ದೆ ಹಾಗೂ ತೋಟಗಳಲ್ಲಿ ಅಡಿಕೆ ಮರಕ್ಕೆ ಸೀರೆ ಹುಡಿಸಿ ಸೀಮಂತ ಕಾರ್ಯ ಮಾಡುವ ಮೂಲಕ ಭೂಮಿ ಹುಣ್ಣಿಮೆಯನ್ನು ಸಡಗರ ಸಂಭ್ರಮದಿಂದ ಮಂಗಳವಾರ ಆಚರಿಸುತ್ತಾರೆ,



ಮಂಗಳವಾರ ಬೆಳಗ್ಗೆಯಿಂದ ರೈತರು ಮುಂಜನೆಯಿಂದಲೇ ಹಬ್ಬದ ತಯಾರಿ ಮಾಡಿಕೋಡು ಕುಟುಂಬ ಸಮೇತವಾಗಿ ಸಕಲ ಐಶ್ವರ್ಯವನ್ನು ಕರುಣಿಸು ಭೂಮಿ ತಾಯಿಗೆ ಚರಗ (ಖಾಧ್ಯ)ವನನು ಚೆಲ್ಲುವ ಮೂಲಕ ಭೂಮಿ ತಾಯಿಯನನು ಸಂತಷ್ಟಪಡಿಸಲಾಗುವುದು ಎಂದು ನಂಬಲಾಗಿದೆ ಪ್ರತಿವರ್ಷ ಸೀಗೆ ಹುಣ್ಣಿಮೆ ದಿನ ರೈತರು ತಮ್ಮ ತಮ್ಮ ಜಮೀನಿನಲ್ಲಿ ಕುಟುಂಬದವರ ಸಮೇತ ಎಲ್ಲರೂ ಸೇರಿ ಗಾಡಿ ಹಾಗೂ ಟ್ರ್ಯಾಕ್ಟರ್‌ಗಳನ್ನು ಸಿಂಗರಸಿಕೊಂಡು ಅದರಲ್ಲಿ ಜಮೀನಿಗೆ ಬಂದು ಫಸಲಿಗೆ ಪೂಜೆ ಮಾಡಿ, ನಂತರ ತಾಯಿಗೆ ಉಡಿ ತಂಬಿ ‘ೂಮಿ ತಾಯಿಯನ್ನು ಶ್ರದ್ದೆಯಿಂದ ಪ್ರಾರ್ಥಿಸಿ ಪ್ರತಿ ವರ್ಷ ಉತ್ತಮ್ಮ ಬೆಳೆ ಕೊಟ್ಟು ಸಕಲ ಜೀವರಾಶಿಗಳನ್ನು ಕಾಪಾಡಿ ಎಂದು ಬೇಡಿಕೊಳ್ಳುತ್ತಾರೆ

ಸೀಗೆ ಹುಣ್ಣಿಮೆಗೆ ವಿಶೇಷವಾಗಿ ಮನೆಯಿಂದ ತಯಾರಿಸಕೊಂಡು ತಂದಿದ್ದ ಹೋಳಿಗೆ ಕಡುಬು, ಗಿಣ್ಣ,ರೋಟ್ಟಿ ಬುತ್ತಿ,ಶೇಂಗಾ,ಚಟ್ನಿ,ಗುರುಳಿ,ಪುಂಡಿ ಸೇರಿದಮತೆ ಅನೇಕ ರುಚಿಕರವಾದ ಖಾಧ್ಯಗಳನ್ನು ಭೂಮಿ ತಾಯಿಗೆ ನೈವೈದ್ಯ ಮಾಡಿ ಜಾಮಿನಿನಲ್ಲಿ ಚರಗ ಹೋಡೆದ ನಂತರ ಕುಟುಂಬದವರು ಸೇರಿ ಊಟ ಮಾಡಿದರು.

ಆಧುನಿಕತೆ ಎಷ್ಟೇ ಬೆಳೆದರೂ ಇಂತಹ ಅನೇಕ ಸಂಪ್ರಾದಯಗಳು ಇನ್ನೂ ಜೀವಂತವಾಗಿ ಇದೆ ಎಂದರೆ ಅದಕ್ಕೆ ಸನಾತನ ಧರ್ಮವೂ ಕಾರಣ ಎಂದರೆ ತಪ್ಪಾಗಲಾರದು.

# ಗೋವಿಗೆ ಬೆಂಕಿ ಹಾಕಿ ವಿಕೃತಿ ಖಂಡನಿಯ: ಜೆಎಸ್‌ರಘು

**ಚಿಕ್ಕಮಗಳೂರು:** ನಗರದ ವಿಜಯಪುರದಲ್ಲಿರಸ್ತೆಯಲ್ಲಿ ಸಾಗುತ್ತಿದ್ದ ಗೋವಿನ ಬಾಲಕ್ಕೆ ಮತೀಯ ವ್ಯಕ್ತಿಗಳು ಸೆಂಟ್ ಸಿಂಪಡಿಸಿ ಬೆಂಕಿ ಹಚ್ಚಿ ಆನಂದಿಸಿ ವಿಕೃತಿ ಮೆರೆದಿದ್ದು. ಇದನ್ನು ಪ್ರಶ್ನಿಸಿದ ಸಂಘಟನೆಯಕಾರ್ಯಕರ್ತರ ಮೇಲೆ ಕೇಸು ದಾಖಲಿಸಿರುವುದು ಆಘಾತಕಾರಿಎಂದುಜಿಲ್ಲಾ ಬಿಜೆಪಿ ಕಾರ್ಯದರ್ಶಿ ಜೆ.ಎಸ್‌ರಘು ತಿಳಿಸಿದ್ದಾರೆ.

ಅವರು ಹೇಳಿಕೆಯಲ್ಲಿ ತಿಳಿಸಿ ಭೂಮಿಯಲ್ಲಿಎಲ್ಲ ಜೀವಿಗಳಿಗೂ ಬದುಕುವ ಹಕ್ಕಿದೆಅದರಲ್ಲೂ ಹುಟ್ಟಿನಿಂದ ಸಾಯುವತನಕಅಮೃತದಂತಹ ಹಾಲನ್ನು ನೀಡುವ ಗೋವಿನ ಮೇಲೆ ಕೆಲವು ಮತೀ ಹೀನರು ಬೆಂಕಿ ಹಚ್ಚಿ ವಿಕೃತಿ ಮೆರೆದಿದ್ದು. ಇದನ್ನುಕಂಡು ಸ್ಥಳಿಯರು ಪೊಲೀಸರಿಗೆಅವರನ್ನು ಹಿಡಿದುಕೊಟ್ಟಿದ್ದು. ವಿಷಯ ತಿಳಿದ ಹಿಂದು ಸಂಘಟನೆಯ ಕೆಲವರು ಪೊಲೀಸ್‌ಠಾಣೆಗೆ ತೆರಳಿ ಪ್ರಕರಣವನ್ನು ಖಂಡಿಸಿದ್ದು. ಈ ವೇಳೆ ಅಲ್ಲಿಗೆ ಆಗಮಿಸಿದ ವಿಕೃತಿ ಮೆರೆದವರ ಪೋಷಕರು. ಬುದ್ಧಿ ಹೇಳಬೇಕಾದ ಅದೇ ಕೋಮಿನ ಮಹಿಳೆ ಸಂಘಟನೆಯಯುವಕರ ಮೇಲೆ ಕೇಸು ದಾಖಲಿಸಿದ್ದು. ಪರಾಮರ್ಶಿಸಬೇಕಾದ ಪೋಲಿಸ್ ಇಲಾಖೆ. ಕಾಂಗ್ರೆಸ್ ಸರ್ಕಾರದಅಣತಿಯಂತೆ ಕೇಸು ದಾಖಲಿಸಿರುವುದು ಖಂಡನೀಯವಾಗಿದ್ದು.



ಜಿಲ್ಲೆಯಲ್ಲಿ ಗೋವು ಕಳ್ಳತನ, ವಿಕೃತಿ ಮತಿಯರ ದಬ್ಬಾಳಿಕೆ ನಡೆಯುತ್ತಿದ್ದು. ಇದಕ್ಕೆ ಪೋಲಿಸರುಅಸ್ಪದ ನೀಡುತ್ತಿದ್ದುಇದರ ವಿರುದ್ಧ ಬೃಹತ್ ಹೋರಾಟ ನಡೆಸುವಎಚ್ಚರಿಕೆಯನ್ನು ನೀಡಿದ್ದಾರೆ.

# ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವ ಕಾರ್ಯಕ್ರಮ

**ಚನ್ನಗಿರಿ :** ಮಹರ್ಷಿ ವಾಲ್ಮೀಕಿಯವರು ರಾಮಾಯಣವನ್ನು ಜಗತ್ತಿಗೆ ಪರಿಚಯಿಸುವ ಮೂಲಕ ಜನರಲ್ಲಿ ಸಹೋದರತ್ವ, ಬಂದುತ್ವ ಮತ್ತು ಸಂಸ್ಕಾರ ಮನೋಬಾವನೆಗಳನ್ನು ಅಂದಿನ ಕಾಲದಲ್ಲಿಯೇ ತೋರಿಸಿಕೊಟ್ಟ ಮಹಾನ್ ಮಹರ್ಷಿಗಳಾಗಿದ್ದರು ಎಂದು ಶಾಸಕ ಬಸವರಾಜು ಶಿವಗಂಗಾ ಹೇಳಿದರು.



ಮಂಗಳವಾರ ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಸಮಿತಿ ಮತ್ತು ಚನ್ನಗಿರಿ ತಾಲೂಕು ವಾಲ್ಮೀಕಿ ಸಮಾಜದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಮಹರ್ಷಿ ವಾಲ್ಮೀಕಿಯವರು ಒಬ್ಬ ವಿಶೇಷವಾದ ಅದರ್ಶ ವ್ಯಕ್ತಿಯಾಗಿದ್ದು ಒಂದು ಸಮುದಾಯಕ್ಕೆ ಮೀಸಲಾಗದ ವ್ಯಕ್ತಿಯಾಗದೇ ಇಡೀ ಜಗತ್ತಿನ ಮಾರ್ಗದರ್ಶಕರಾಗಿದ್ದು ಸಾಮರಸ್ಯದ ಸಮ ಸಮಾಜವನ್ನು ನಿರ್ಮಾಣ ಮಾಡುವ ವಿಧಾನವನ್ನು ತೋರಿಸಿಕೊಟ್ಟಿದ್ದು ಅವರ ಜಯಂತ್ಯೋತ್ಸವವನ್ನು ಇಡೀ ದೇಶದ ಎಲ್ಲಾ ಬಾಗಗಳಲ್ಲಿಯೂ ಆಚರಿಸುವಂತಾಗಿದೆ ಎಂದರು. ಚನ್ನಗಿರಿಯಲ್ಲಿ ಒಂದು ಉತ್ತಮ ವಾಲ್ಮೀಕಿ ಸಮುದಾಯ ಭವನನಿರ್ಮಾಣ ಮಾಡಲಾಗಿದೆ. ಅದರಂತೆ ಶಾಸಕರ ಅನುದಾನದಲ್ಲಿ ಆಗತ್ಯವಿರುವಂತರಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದರು. ಮತ್ತು ನಾಯಕ ಸಮಾಜದವ ಅಶಯದಂತೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ಹಾಸ್ಟೆಲ್‌ನ್ನು ಸಹ ನಿರ್ಮಾಣ ಮಾಡಲು ಇಂದೇ ಮುಖ್ಯಾಧಿಕಾರಿಗಳಿಗೆ ನಿವೇಶನವನ್ನು ಮಂಜೂರು ಮಾಡುವಂತೆ ತಿಳಿಸಲಾಗುವುದು ಎಂದರು. ಕಳೆದ ಚುನಾವಣೆಯಲ್ಲಿ ಹೊದಿಗೆರೆ ರಮೇಶ್‌ರವರ ನೇತ್ರತ್ವದಲ್ಲಿ ಇಡೀ ಸಮಾಜವು ನನ್ನ ಬೆನ್ನಿಗೆ ನಿಂತು ನನ್ನನ್ನು ಶಾಸಕನನ್ನಾಗಿ ಮಾಡಿದ್ದು ಎಂದಿಗೂ ಸಮಾಜದ ಜೊತೆ ನಾನಿರುತ್ತೇನೆ ಎಂದರು.

ತಾಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಹೊದಿಗೆರೆ ರಮೇಶ್ ಮಾತನಾಡಿ ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವವನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳು ಅಚರಣೆಗೆ ತಂದಿರುವುದು ಸ್ವಾಗತಾರ್ಹವಾಗಿದೆ. ಅದರಂತೆ ಇಂದು ಇಡೀ ಸಮಾಜದ ಬಂಧುಗಳು ಮಹರ್ಷಿ ವಾಲ್ಮೀಕಿ ವೃತ್ತದಿಂದ ಸಮುದಾಯ ಭವನದವರೆಗೆ ವಿಜೃಂಭ್ರಣೆಯಿಂದ ಮೆರವಣಿಗೆ ಮಾಡುವ ಮೂಲಕ ಜಂಯತ್ಯೋತ್ಸವಕ್ಕೆ ಅರ್ಥವನ್ನು ತಂದುಕೊಟ್ಟಿದ್ದಾರೆ. ವಾಲ್ಮೀಕಿ ಸಮಾಜಕ್ಕೆ ಒಂದು ಇತಿಹಾಸವಿದೆ. ವಾಲ್ಮೀಕಿ ಸಂತತಿಯು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ರಾಜಧರ್ಮವನ್ನು ಉಳಿಸಿಕೊಂಡು ತಾಲೂಕಿನ ಹಿರಿಯರು ಸಮಾಜದ ಏಳಿಗೆಗಾಗಿ ಸಾಕಷ್ಟು ದುಡಿದಿದ್ದು ತಮ್ಮದೇ ಆದ ಕೊಡುಗೆ ನೀಡಿದ್ದಾರೆ.ಮತ್ತು ಸಮಾಜದವರು ಎಲ್ಲಾ ಸಮಾಜಗಳೊಂದಿಗೆ ಪ್ರೀತಿ ವಿಶ್ವಾಸದಿಂದ ಸಹಬಾಳ್ವೆಯಿಂದ ಜೀವನ ಸಾಗಿಸುತ್ತಿದ್ದಾರೆ. ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿಯವರು ಮತ್ತು ಶಾಸಕರ ನೇತ್ರತ್ವದಲ್ಲಿ ಉತ್ತಮ ರಸ್ತೆ ಕಾಮಗಾರಿಗೆ 2 ಕೋಟಿ ರೂಗಳನ್ನು ನೀಡಿದ್ದು ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವದಂದು ಶಾಸಕರು ಶಂಕುಸ್ಥಾಪನೆಯನ್ನು ಸಹ ನೆರವೇರಿಸಿದ್ದಾರೆ. ಉಳಿದಂತೆ ಸಮಾಜವು ಶೈಕ್ಷಣಿಕವಾಗಿ ಅಭಿವೃದ್ದಿಯಾಗುವ ಮೂಲಕ ಸಂಘಟನೆಯಾಗಬೇಕಿದ್ದು ಹಿರಿಯರ ಅಶಯದಂತೆ ಸಮಾಜದ ವತಿಯಿಂದ ಒಂದು ಹಾಸ್ಟೆಲ್ ನಿರ್ಮಾಣಕ್ಕೆ ನಿವೇಶನದ ಆಗತ್ಯವಿದ್ದು ಶೀಘ್ರವೇ ನಿವೇಶನ ಮಂಜೂರು ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಉಮೇಶ್ ನಾಯಕನಹಟ್ಟಿ, ಮಹರ್ಷಿ ವಾಲ್ಮೀಕಿಯವರ ಕುರಿತು ಉಪನ್ಯಾಸ ನೀಡಿದರು. ಜೀವ ವೈವಿಧ್ಯ ನಿಗಮದ ಅಧ್ಯಕ್ಷ ವಡ್ನಾಳ್ ಜಗದೀಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ವಾಲ್ಮೀಕಿ ಸಮಾಜದ ನಗರದ ಅಧ್ಯಕ್ಷ ಜಯರಾಂ, ಮುಖಂಡರಾದ ಪಿ.ಲೋಹಿತ್‌ಕುಮಾರ್, ರಾಮಚಂದ್ರಮೂರ್ತಿ, ಮೆದಿಕೆರೆ ಸಿದ್ದೇಶ್, ತುಮ್‌ಕೋಸ್ ನಿರ್ದೇಶಕ ಲೋಕೇಶ್ವರ್, ತಹಶೀಲ್ದಾರ್ ನಾಗರಾಜ್, ಬಣಜಾರ್ ಸಮಾಜದ ಅಧ್ಯಕ್ಷ ವೀರೇಶ್‌ನಾಯ್ಕ, ಚನ್ನಗಿರಿ ಕ್ಷತ್ರೀಯ ಮರಾಠ ಅಧ್ಯಕ್ಷ ಕಾಫಿಪುಡಿ ಶಿವಾಜಿರಾವ್, ಛಲವಾದಿ ಸಮಾಜದ ಅಧ್ಯಕ್ಷ ಸಿ.ನಾಗರಾಜ್, ಪುರಸಭೆ ಸದಸ್ಯ ಗಾದ್ರಿರಾಜು, ಜಿತೇಂದ್ರರಾಜ್, ಪಿ.ಬಿ.ನಾಯಕ್,ಕುಮಾರ್ ತಳವಾರ್, ಬುಳಸಾಗರ ನಾಗರಾಜ್ ಮತ್ತು ಸಮಾಜದ ನಾಯಕ ಸಮಾಜದ ಮುಖಂಡರು ಹಾಜರಿದ್ದರು.

# ಸಿದ್ದರಾಮಯ್ಯ ಏನು ಲಿಂಗಾಯತ ಧರ್ಮಗುರುಗಳೇ..?

**ಬೆಂಗಳೂರು:** ಪ್ರತ್ಯೇಕ ಧರ್ಮ ಕುರಿತು ವೀರಶೈವ ಲಿಂಗಾಯಿತರಿಗೆ ಇಲ್ಲದ ಉಸಾಬರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಏಕೆ ಬೇಕು ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತರಾಟೆಗೆ ತೆಗೆದುಕೊಂಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೀರಶೈವ ಲಿಂಗಾಯಿತ ಸಮುದಾಯದಲ್ಲಿ ಪ್ರತ್ಯೇಕ ಧರ್ಮ ಸ್ಥಾಪನೆ ಮಾಡುವ ಕುರಿತು ಅನೇಕರು ವಿರೋಧ ವ್ಯಕ್ತಪಡಿಸಿದ್ದಾರೆ. ಆ ಸಮುದಾಯಕ್ಕೆ ಇಲ್ಲದ ಉಸಾಬರಿ ಸಿದ್ದರಾಮಯ್ಯನವರಿಗೆ ಏಕೆ ಬೇಕು ಎಂದು ಪ್ರಶ್ನೆ ಮಾಡಿದರು.

ಸಿದ್ದರಾಮಯ್ಯ ಜಾತಿಗಳನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಲಿಂಗಾಯತರಿಗೆ ಇಲ್ಲದ ಉಸಾಬರಿ ಯಾಕೆ? ಅವರೇನು ಧರ್ಮಗುರುಗಳಾ? ಎಂದು ಕಿಡಿಕಾರಿದರು. ಬೌದ್ಧ ಧರ್ಮಕ್ಕೆ ಮತಾಂತರಗೊಂಡವರಿಗೆ ಮೀಸಲಾತಿ ನೀಡುವುದಾಗಿ ಸಿಎಂ ಹೇಳಿದ್ದಾರೆ. ಈಗಾಗಲೇ ಕೇಂದ್ರದ ಪ್ರಧಾನಿ ಮೋದಿ ಸರ್ಕಾರವೇ ಮೀಸಲಾತಿ ಕೊಟ್ಟಿದೆ. ಈಗ ನಾವು ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಇದರಲ್ಲಿ ಹೊಸದೇನಿದೆ ಎಂದು ಪ್ರಶ್ನೆ ಮಾಡಿದರು.

ಕೇಂದ್ರ ಸರ್ಕಾರದಡಿ ಯಾರು ಪರಿಶಿಷ್ಟರಿದ್ದಾರೆ ಅವರು ಬೌದ್ಧ ಧರ್ಮದಲ್ಲಿದ್ದರೆ ಅವರಿಗೆ ಮೀಸಲಾತಿ ಸಿಗಲಿದೆ ಎಂದು ಹೇಳಿದೆ. ಮೊದಲಿಂದಲೂ ಕೇಂದ್ರ ಕೊಡುತ್ತಿದೆ, ರಾಜ್ಯ ಸರ್ಕಾರ ಹೊಸದಾಗಿ ಏನೂ ಮಾಡಿಲ್ಲ ಎಂದು ಆಕ್ಷೇಪಿಸಿದರು.

ಹಿಂದಿನ ಬಿಜೆಪಿ ಸರ್ಕಾರ ಎಸ್ಟಿಗಳಿಗೆ 3%–7%ಗೆ ಮೀಸಲಾತಿ ಹೆಚ್ಚಳ ಮಾಡಿತ್ತು. ಸಿದ್ದರಾಮಯ್ಯ ಇದನ್ನು ನಂಬಬೇಡಿ ಎಂದು ಹೇಳಿದ್ದರು. ಈಗ 7% ಮೀಸಲಾತಿ ನಡೆಯುತ್ತಿದೆ. ಈಗ ಸಿದ್ದರಾಮಯ್ಯ ಸುಳ್ಳು ಹೇಳ್ತಿಲ್ಲವಾ.? ಎಂದು ಪ್ರಶ್ನಿಸಿದರು. ಈಗ ಎಸ್ಟಿಗಳಿಗೆ 7% ಕೊಟ್ಟು, ಬೇರೆ ಜಾತಿಗಳನ್ನು ಸೇರಿಸಲು ಹೊರಟಿದ್ದಾರೆ. ಅವರಿಗೆ ಅನ್ಯಾಯ ಮಾಡಲು ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದರು ಜನಗಣತಿ ಗೊಂದಲದ ಗೂಡಾಗಿದೆ. ಕೊಟ್ಟಿರುವ ಸಾಫ್‌ವೇರ್ ಕೈ ಕೊಟ್ಟಿದೆ. 60 ಪ್ರಶ್ನೆ ತುಂಬಲು ಒಂದು ಗಂಟೆ ಬೇಕಿದೆ. ಬೆಂಗಳೂರಿನಲ್ಲಿ ಯಾರ ಮನೆಲ್ಲೂ ಆರಂಭವಾಗಿಲ್ಲ. ಅಪಾರ್ಟ್‌ಮೆಂಟ್‌ನಲ್ಲಿ ಈಗ ಶುರು ಮಾಡುತ್ತಾರಂತೆ.ಇಂದು ವಾಲಿಕಿ ಜಯಂತಿ ನಡೆಯುತ್ತಿದೆ. ಪ್ರಸನ್ನಾನಂದ ಗುರೂಜಿ ಬಂದಿಲ್ಲ. ಯಾಕಂದರೆ ಪ್ರಕರಣದಲ್ಲಿ ಸಿದ್ದರಾಮಯ್ಯ ಕೈವಾಡವಿದೆ ಎಂದು. ಮೂನ್ನೂರಕ್ಕೂ ಹೆಚ್ಚು ಕೋಟಿ ಎಸ್‌ಸಿ–ಎಸ್‌ಪಿ–ಎಸ್‌ಪಿಪಿ ಹಣ ವ್ಯಯ ಮಾಡಿರುವುದದಾಗಿ ಹೇಳಿದ್ದಾರೆ.

# ಜಿಲ್ಲಾ ಮಟ್ಟದ ಏಕಗವಾಕಿ ಸಮಿತಿ ಸಭೆ

**ಚಿಕ್ಕಮಗಳೂರು:** ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮತ್ತು ಕೈಗಾರಿಕಾ ಸ್ಪಂದನ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಕ್ಟೋಬರ್ 8 ರಂದು ಮಧ್ಯಾಹ್ನ 3 ಗಂಟೆಗೆ ಆಯೋಜಿಸಲಾಗಿದೆ. ಈ ಸಂಬಂಧ ಮನವಿ, ಅಹವಾಲುಗಳು ಇದ್ದಲ್ಲಿ ಜಿಲ್ಲೆಯ ಕೈಗಾರಿಕೋದ್ಯಮಿಗಳು ಅಂದು ಮಧ್ಯಾಹ್ನ 12 ಗಂಟೆಯೊಳಗೆ ನಗರದ ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು (ದೂರವಾಣಿ ಸಂಖ್ಯೆ: 08262–295821) ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

# ನೀರಿನಲ್ಲಿ ಕೊಚ್ಚಿ ಹೋಗಿದ್ದ 6 ಮಂದಿಯಲ್ಲಿ ಮೂವರ ಶವ ಪತ್ತೆ, ಉಳಿದವರಿಗಾಗಿ ಶೋಧ

**ಕುಣಿಗಲ್:** ತಾಲೂಕಿನ ಮಾರ್ಕೋನಹಳ್ಳಿ ಜಲಾಶಯದಲ್ಲಿ ನೀರಿನ ಪ್ರಮಾಣ ಹೆಚ್ಚಳದಿಂದ ನೀರು ಪಾಲಾದ ಆರು ಮಂದಿಯಲ್ಲಿ ಮೂವರ ಶವಗಳು ಪತ್ತೆಯಾಗಿದ್ದು, ಉಳಿದ ಮೂವರಿಗಾಗಿ ಶೋಧಕಾರ್ಯ ಮುಂದುವರೆದಿದೆ.

ಜಲಾಶಯಕ್ಕೆ ದಿಢೀರನೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದು ಜಲಾಶಯದ ಎಡ ಹಾಗೂ ಬಲ ಕೋಡಿ ಹಳ್ಳದಲ್ಲಿ ಆಟವಾಡುತ್ತಿದ್ದ 9 ಜನರ ಪೈಕಿ ಆರು ಮಂದಿ ನೀರಿನಲ್ಲಿ ಕೊಚ್ಚಿಹೋಗಿದ್ದು, ಮೂವರ ಶವ ಪತ್ತೆಯಾಗಿ ಉಳಿದ ನಾಲ್ವರಿಗಾಗಿ ಕಾರ್ಯಾಚರಣೆ ನಡೆಯುತ್ತಿದೆ.

ತಾಲೂಕಿನ ಯಡಿಯೂರು ಹೋಬಳಿ ಮಾಗಡಿಪಾಳ್ಯ ಗ್ರಾಮದ ಸಾಧಿಯಾ (25), ತುಮಕೂರು ಬಿಜಿ ಪಾಳ್ಯದ ಅರ್ಬಿನ್ (20), ತುಮಕೂರಿನ ಬಿಜಿ ಪಾಳ್ಯದ ತಬಸ್ಸಮ್ (46), ಶಬಾನ (44), ಒಂದು ವರ್ಷದ ಮೋಬ್ ನಾಲ್ಕು ವರ್ಷದ ನಿಪ್ರಾ ನೀರಿನಲ್ಲಿ ಕೊಚ್ಚಿಹೊಗಿದ್ದರು. ಈ ಪೈಕಿ ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿ ಇಬ್ಬರ ಶವ ಹೊರತೆಗೆದಿದ್ದರು. ಇಂದು ಮತ್ತೊಬ್ಬರ ಶವ ಪತ್ತೆಯಾಗಿದ್ದು, ಉಳಿದ ಮೂವರ ಶವಗಳ ಪತ್ತೆಗಾಗಿ ಅಗ್ನಿಶಾಮಕ ದಳ ಕಾರ್ಯಾಚರಣೆ ನಡೆಸುತ್ತಿದೆ.

**ಘಟನೆ ವಿವರ :**

ರಜೆ ಇದ್ದ ಕಾರಣ ತುಮಕೂರಿನ ಬಿಜಿ ಪಾಳ್ಯದ ತಬಸ್ಸಮ್, ಶಬಾನ ಹಾಗೂ ಆಕೆಯ ಮಕ್ಕಳು ತಮ ಸಂಬಂಧಿಕರಾದ ಕುಣಿಗಲ್ ತಾಲೂಕಿನ ಮಾಗಡಿಪಾಳ್ಯ ಗ್ರಾಮದ ಮೋಸಿನ್ ಹಾಗೂ ಸಾಧಿಯಾ ಅವರ



ಮನೆಗೆ ಬಂದು ಅವರ ಮನೆಯಲ್ಲಿ ಉಳಿದುಕೊಂಡು ನಂತರ ಮಾರ್ಕೋನಹಳ್ಳಿ ಜಲಾಶಯ ನೋಡಲೆಂದು ಸುಮಾರು 12 ಮಂದಿ ಒಟ್ಟಾಗಿ ಬಂದಿದ್ದಾರೆ.

ಸಣ್ಣ ಮಗು ಹಾಗೂ ಒಂದು ಅಜ್ಜಿ ನದಿ ದಡದಲ್ಲಿ ಕುಳಿತಿದ್ದರು. ಉಳಿದ ಒಂಭತ್ತು ಮಂದಿ ನೀರಿನಲ್ಲಿ ಆಟವಾಡಲು ಹೋಗಿದ್ದಾರೆ. ಈ ವೇಳೆ ನೀರುನ ಪ್ರಮಾಣ ಕಡಿಮೆ ಹರಿಯುತ್ತಿತ್ತು. ದಿಢೀರನೆ ನೀರಿನ ಪ್ರಮಾಣ ಹೆಚ್ಚಾಗಿ 1200 ಕ್ಯೂಸೆಕ್ಸ್ ನೀರು ಜಲಾಶಯಕ್ಕೆ ಹರಿದು ಬಂದು, ಇಷ್ಟೆ ಪ್ರಮಾಣದ ನೀರು ಕೋಡಿ ಸೈಫೋನ್ ಮೂಲಕ ಹೊರ ಹರಿದ ಕಾರಣ ಕೋಡಿಹಳ್ಳದಲ್ಲಿ ಆಟವಾಡುತ್ತಿದ್ದ ಒಂಬತ್ತು ಮಂದಿ ಪೈಕಿ ಆರು ಮಂದಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಮೂವರ ಪಾರು: ನೀರಿನಿಂದ ಮೋಸಿನ್ ಈಜಿ ದಡ ಸೇರಿ ಬಳಿಕ ಬಶೀರಾ ಹಾಗೂ ನವಾಜ್ ಅವರನ್ನು ರಕ್ಷಿಸಿದ್ದು ,ಈ ಮೂರು ಮಂದಿ ಪ್ರಾಣಾಪಯದಿಂದ ಪಾರಾಗಿದ್ದಾರೆ.

ಕುಣಿಗಲ್ ಅಗ್ನಿಶಾಮಕ ಸಿಬ್ಬಂದಿ ನೀರಿನಲ್ಲಿ ಕೊಚ್ಚಿಕೊಂಡು ಹೋದವರ ಪತ್ತೆಗಾಗಿ ಸುಮಾರು ನಾಲ್ಕು ಗಂಟೆ ಕಾಲ ಸತತವಾಗಿ ತೀವ್ರ ಕಾರ್ಯಾಚರಣೆ ನಡೆಸಿದರೂ ಪತ್ತೆಯಾಗಿಲ್ಲ. ನೀರಿನ ಹರಿವು ಹೆಚ್ಚಳ ಹಾಗೂ ಕತ್ತಲೆಯಾದ ಕಾರಣ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು, ಇಂದೂ ಕಾರ್ಯಾಚರಣೆ ಮುಂದುವರೆಸಿ ಮೂವರ ಶವಗಳನ್ನು ಹೊರತೆಗೆದಿದ್ದು, ಉಳಿದವರಿಗಾಗಿ ಶೋಧಕಾರ್ಯ ಮುಂದುವರೆಸಿದ್ದಾರೆ.

**ಎಸ್‌ಪಿ ಭೇಟಿ:**

ಘಟನಾ ಸ್ಥಳಕ್ಕೆ ಎಸ್‌ಪಿ ಕೆ.ಅಶೋಕ್, ಎಎಸ್‌ಪಿ ಗೋಪಾಲ್, ಪುರುಷೋತ್ತಮ್, ಡಿವೈಎಸ್‌ಪಿ ಓಂಪ್ರಕಾಶ್, ಸಿಪಿಐಗಳಾದ ಮಾದ್ಯನಾಯಕ್, ನವೀನ್‌ಗೌಡ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಮಾಹಿತಿ ಸಂಗ್ರಹಿಸಿದರು.

## ಪ್ರವಾಸಿಗರ ಹೆಚ್ಚಳ

ಕಳೆದ ಹಲವು ದಿನಗಳಿಂದ ತುರುವೇಕೆರೆಯ ಮಲ್ಲಾಘಟ್ಟ ಕೆರೆ, ವೀರವೈಷ್ಣವಿ ನದಿ ಸೇರಿದಂತೆ ಹಲವು ಕೆರೆಗಳು ತುಂಬಿ ಮಾರ್ಕೋನಹಳ್ಳಿ ಜಲಾಶಯಕ್ಕೆ 1200 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಇದರಿಂದ ಜಲಾಶಯ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿ ಇಷ್ಟೆ ಪ್ರಮಾಣದ ನೀರು ಸೈಫೋನ್ ಹಾಗೂ ಕೋಡಿ ಸೈಫೋನ್ ಮೂಲಕ ಹೊರ ಹರಿಯುತ್ತಿದೆ.ಮನಮೋಹಕ ರಮ್ಯವಾದ ನೋಟವನ್ನು ನೋಡಲು ತಾಲೂಕು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸಾವಿರಾರು ಪ್ರವಾಸಿಗರು ಬರುತ್ತಿದ್ದಾರೆ, ಇಂದು ವಾಲಿಕಿ ಜಯಂತಿ ಸರ್ಕಾರಿ ರಜೆ ದಿನವಾದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂದಿದ್ದರು,

## ಸಿಜೆಐ ಮೇಲೆ ಶೂ ಎಸೆಯುವ ಯತ್ನ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

**ಬೆಂಗಳೂರು:** ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರ ಮೇಲೆ ಶೂ ಎಸೆದ ಆರೋಪಿಯನ್ನು ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಂಡು, ಗಡೀಪಾರು ಮಾಡಬೇಕೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನೋಹರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಕೇಶ್‌ಕಿಶೋರ್ ಎಂಬ ವಕೀಲ ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ಕುಳಿತಿದ್ದ ಪೀಠದತ್ತ ಶೂ ಎಸೆಯಲು ಯತ್ನಿಸಿರುವುದು ಪ್ರಜಾಪ್ರಭುತ್ವಕ್ಕೆ ಹಾಗೂ ನ್ಯಾಯಾಂಗ ವ್ಯವಸ್ಥೆಗೆ ಮಾಡಿರುವ ಅಪಚಾರವಾಗಿದೆ. ಇವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನೋಹರ್ ಆಗ್ರಹಿಸಿದರು.

ಇತಹ ಕೃತ್ಯವೆಸಗಿದ ವ್ಯಕ್ತಿಯನ್ನು ಬಂಧಿಸಿ, ಬಿಡುಗಡೆ ಮಾಡಿರುವುದು ಅತ್ಯಂತ ದುರದೃಷ್ಟಕರ ಸಂಗತಿ. ಈ ವ್ಯಕ್ತಿ ಮಾಡಿರುವ ಕೃತ್ಯ ದೇಶದ ಪ್ರತಿಯೊಬ್ಬರಿಗೂ ಮಾಡಿರುವ ಅವಮಾನವಾಗಿದೆ. ಈ ಕೃತ್ಯವನ್ನು ಖಂಡಿಸಲು ಕೇಂದ್ರ ಸರ್ಕಾರ ಮುಂದಾಗದಿರುವುದು ದುರದೃಷ್ಟಕರ ಘಟನೆ ಎಂದು ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿಯವರು ಈ ಘಟನೆಯನ್ನು ಖಂಡಿಸಿದ್ದಾರೆ. ಆದರೆ ಯಾವ ಬಿಜೆಪಿ ಮುಖಂಡರೂ ಈ ಘಟನೆಯನ್ನು ಖಂಡಿಸಿಲ್ಲ ಎಂದು ಹೇಳಿದರು.ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಸುಧಾಕರರಾವ್, ಪ್ರಕಾಶ್, ಹೇಮರಾಜು, ಕುಶಾಲ್ ಅರವೇಗೌಡ, ಪುಟ್ಟರಾಜು, ಉಮೇಶ್, ನವೀನ್ ಸುಂಕದಕಟ್ಟೆ, ಚಿನ್ನಿ ಪ್ರಕಾಶ್, ಓಬಲೇಶ್, ಆನಂದ್, ಪ್ರವೀಣ್, ಪವನ್, ಅಜಯ್, ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

## ಪಟಾಕಿ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಕ್ಕೆ ಸೂಚನೆ

**ಬೆಂಗಳೂರು:** ದೀಪಾವಳಿ ಸಮೀಪಿಸುತ್ತಿದ್ದು ಪಟಾಕಿಯಿಂದ ಯಾವುದೇ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವಂತೆ ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರು ಸೂಚಿಸಿದ್ದಾರೆ.

ಈ ಸಂಬಂಧ ತಮ ಕಚೇರಿಯಲ್ಲಿಂದು ಜಿಬಿಎ, ಅಗ್ನಿ ಶಾಮಕ, ಬೆಸ್ಕಾಂ ಹಾಗೂ ಜಿಎಸ್‌ಟಿ ಅಧಿಕಾರಿಗಳು ಸೇರಿದಂತೆ ಪಟಾಕಿ ಮಾರಾಟಗಾರರ ಜೊತೆ ಆಯುಕ್ತರು ಸಭೆ ನಡೆಸಿ ಕೆಲವು ಸಲಹೆ, ಸೂಚನೆ ನೀಡಿದರು.ಕಳೆದ ವರ್ಷ ಆನೇಕಲ್‌ನ ಪಟಾಕಿ ಗೋದಾಮಿನಲ್ಲಿ ಸಂಭವಿಸಿದ ಘಟನೆ ನಗರದಲ್ಲಿ ಮರುಕಳಿಸದಂತೆ ಎಚ್ಚರಿಕೆ ವಹಿಸಲು ಸೂಚನೆ ನೀಡಿದ್ದಾರೆ.

ಎಲ್ಲಾ ವಿಭಾಗದವರು ನಮಗೆ ಮಾಹಿತಿ ನೀಡಿದ್ದಾರೆ. ಪಟಾಕಿ ಮಾರಾಟ ಮಾಡುವವರು ಅರ್ಜಿ ಹಾಕಿದರೆ ಚೀಟಿ ಎತ್ತುವ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಪಟಾಕಿ ಮಾರಾಟ ಮಾಡಲು 57 ಮೈದಾನಗಳಲ್ಲಿ ,411 ಜಾಗ ನಿಗಧಿ ಮಾಡಲಾಗಿದೆ ಎಂದರು.ಅಗ್ನಿ ಶಾಮಕ ಇಲಾಖೆಗೆ ಮಾಲಿನ್ಯ ಮಂಡಳಿ ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಯಾವುದೇ ಗೊಂದಲ ಹಾಗೂ ಸಮಸ್ಯೆಗಳಾಗದಂತೆ ಎಲ್ಲರಿಗೂ ಸೂಚನೆ ನೀಡಲಾಗಿದೆ ಎಂದು ಆಯುಕ್ತರು ಹೇಳಿದರು.

## ಅ.10ಕ್ಕೆ ಸಿಎಂ ನೇತೃತ್ವದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೊದಲ ಸಭೆ

**ಬೆಂಗಳೂರು:** ಬಿಬಿಎಂಪಿ ಹೋಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ಥಿತ್ವಕ್ಕೆ ಬಂದ ನಂತರ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಬಿಎ ಅಧಿಕಾರಿಗಳೊಂದಿಗೆ ಸಭೆ ನಡೆಸಲು ತೀರ್ಮಾನಿಸಿದ್ದಾರೆ.

ಇದೇ 10ರಂದು ಜಿಬಿಎ ಕಚೇರಿಯಲ್ಲಿರುವ ಕೆಂಪೇಗೌಡ ಸಭಾಂಗಣದಲ್ಲಿ ಸಿದ್ದರಾಮಯ್ಯ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾಗಿ 5 ನಗರ ಪಾಲಿಕೆಗಳನ್ನು ಸೃಜಿಸಲಾಗಿದೆ.

ಈ ಐದು ನಗರ ಪಾಲಿಕೆಗಳಿಗೆ ಶೀಘ್ರ ಚುನಾವಣೆ ನಡೆಸಬೇಕಿರುವುದರಿಂದ ಜಿಬಿಎ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಭೆ ನಡೆಸುತ್ತಿದ್ದಾರೆ.ಸಭೆಯಲ್ಲಿ ಜಿಬಿಎ ಉಪಾಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ನಗರವನ್ನು ಪ್ರತಿನಿಧಿಸುವ ಶಾಸಕರು ಪಾಲ್ಗೊಳ್ಳುತ್ತಿದ್ದಾರೆ.

## ದಸರಾ ರಜೆ ವಿಸ್ತರಣೆಗೆ ನೌಕರರ ಸಂಘ ಆಗ್ರಹ



**ಬೆಂಗಳೂರು:** ಕಳೆದ ಸೆಪ್ಟಂಬರ್ 22ರಿಂದ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯಾದ್ಯಂತ ನಡೆಸುತ್ತಿರುವ ಸಾಮಾಜಿಕ , ಶೈಕ್ಷಣಿಕ ಸಮೀಕ್ಷೆ ಹಿನ್ನೆಲೆಯಲ್ಲಿ ಸಮೀಕ್ಷಾ ಕಾರ್ಯದಲ್ಲಿ ಶಿಕ್ಷಕರು ತೊಡಗಿರುವ ಕಾರಣ, ದಸರಾ ರಜೆ ವಿಸ್ತರಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಸಚಿವ ಮಧು ಬಂಗಾರಪ್ಪನವರಿಗೆ ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಮಾಡಿದೆ.

ಪ್ರಸ್ತುತ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸೆಪ್ಟಂಬರ್ 20ರಿಂದ ಅಕ್ಟೊಬರ್ 7ರವರೆಗೆ ದಸರಾ ರಜೆ ಘೋಷಿಸಲಾಗಿದೆ. ಆದರೆ, ಶಿಕ್ಷಕರು ಜಾತಿಗಣತಿ ಕಾರ್ಯದಲ್ಲಿ ತೊಡಗಿರುವುದರಿಂದ ಈ ರಜೆಯ ಅವಧಿಯನ್ನು ವಿಸ್ತರಿಸಬೇಕೆಂದು ಸಂಘ ಒತ್ತಾಯಿಸಿದೆ.

ಸೆಪ್ಟಂಬರ್ 22ರಿಂದ ಶಿಕ್ಷಕರು ಜಾತಿಗಣತಿ ಪ್ರಾರಂಭಿಸಿದ್ದಾರೆ. ಸಮೀಕ್ಷೆ ಬೆಂಗಳೂರಿನಲ್ಲಿ ಇನ್ನೂ ಗೊಂದಲದಲ್ಲಿ ನಡೆಯುತ್ತಿದೆ. ಹೀಗಾಗಿ ಶಿಕ್ಷಕರು ದೈಹಿಕ ಬೌದ್ಧಿಕವಾಗಿ ಒತ್ತಡದಲ್ಲಿದ್ದಾರೆ. ಅವರಿಗೆ ದೈಹಿಕ ಮಾನಸಿಕ ವಿರಾಮದ ಅವಶ್ಯಕತೆ ಇದೆ. ಹೀಗಾಗಿ ಅಕ್ಟೊಬರ್ 17ರವರೆಗೆ ದಸರಾ ರಜೆ ವಿಸ್ತರಿಸುವಂತೆ ಮನವಿ ಮಾಡಿದೆ.

ಜಾತಿಗಣತಿಯ ಕಾರ್ಯವು ಶಿಕ್ಷಕರಿಗೆ ಹೆಚ್ಚುವರಿ ಜವಾಬ್ದಾರಿಯನ್ನು ಹೇರಿದ್ದು, ಇದರಿಂದ ಅವರ ಶಿಕ್ಷಣ ಕಾರ್ಯಕ್ಕೆ ತೊಂದರೆಯಾಗುತ್ತಿದೆ. ಶಾಲೆಗಳು ಮಕ್ಕಳಿಗೆ ರಜೆ ಘೋಷಿಸಿದ್ದರೂ, ಶಿಕ್ಷಕರು ಗಣತಿಯ ಕೆಲಸದಲ್ಲಿ ತೊಡಗಿರುವುದರಿಂದ ಅವರಿಗೆ ರಜೆಯ ಲಾಭವು ಸಿಕ್ಕಿಲ್ಲ. ಬೆಂಗಳೂರಿನಲ್ಲಿ ಈ ಸಮೀಕ್ಷೆಯು ಇನ್ನೂ ಅಸ್ತವ್ಯಸ್ತವಾಗಿ ನಡೆಯುತ್ತಿದ್ದು, ಶಿಕ್ಷಕರ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಸಂದರ್ಭದಲ್ಲಿ ರಜೆಯನ್ನು ವಿಸ್ತರಿಸಿದರೆ ಶಿಕ್ಷಕರಿಗೆ ಕೆಲಸದ ಒತ್ತಡ ತಗ್ಗಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಈ ಮನವಿಯು ಶಿಕ್ಷಕರ ಆರೋಗ್ಯವನ್ನು ಕಾಪಾಡುವ ಜೊತೆಗೆ, ಶಿಕ್ಷಣ ವ್ಯವಸ್ಥೆಯ ಗುಣಮಟ್ಟವನ್ನು ಕಾಯ್ದುಕೊಳ್ಳುವ ಗುರಿ ಹೊಂದಿದೆ. ಒತ್ತಡದಿಂದ ಕೂಡಿದ ಶಿಕ್ಷಕರು ತಮ ಶಿಕ್ಷಣ ಕಾರ್ಯದಲ್ಲಿ ಸಂಪೂರ್ಣ ಸಾಮರ್ಥ್ಯವನ್ನು ನೀಡಲು ಸಾಧ್ಯವಾಗುವುದಿಲ್ಲ. ರಜೆಯನ್ನು ವಿಸ್ತರಿಸಿದರೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸಲಿದೆ. ಈ ಕೋರಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಕೋರಿಕೊಂಡಿದೆ.

ಕರ್ನಾಟಕದ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮುಖ್ಯವಾಗಿದೆ. ಅವರ ಯೋಗಕ್ಷೇಮಕ್ಕೆ ಆದ್ಯತೆ ನೀಡಬೇಕು. ಜಾತಿಗಣತಿ ಮುಂತಾದ ಹೆಚ್ಚುವರಿ ಕಾರ್ಯಗಳು ಶಿಕ್ಷಕರ ಮೇಲೆ ಒತ್ತಡವನ್ನು ಹೆಚ್ಚಿಸಿದೆ, ಹಾಗಾಗಿ ರಜೆಯ ವಿಸ್ತರಣೆಯು ಈ ಸಮಸ್ಯೆಗೆ ಪರಿಹಾರವಾಗಬಹುದು ಎಂದು ಹೇಳಿದೆ.

# ಬೆಂಗಳೂರಲ್ಲಿ 2.66 ಲಕ್ಷ ಕುಟುಂಬಗಳ ಸಮೀಕ್ಷೆ, ಅಸಂಬದ್ಧ ಪ್ರಶ್ನೆಗಳಿಗೆ ಕೊಕ್

**ಬೆಂಗಳೂರು:** ಜಾತಿ ಗಣತಿ ವೇಳೆ ಕೇಳಲಾಗುತ್ತಿದ್ದ ಕೆಲವು ಅಸಂಬದ್ಧ ಪ್ರಶ್ನೆಗಳಿಗೆ ಕೊಕ್ ನೀಡಲಾಗಿದೆ.ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಯ ಪ್ರಶ್ನೆಗಳಿಗೆ ವಿನಾಯಿತಿ ನೀಡಿ ಸರ್ಕಾರ ಮೌಖಿಕ ಅದೇಶ ಹೊರಡಿಸಿದೆ ಎಂದು ಉನ್ನತ ಮೂಲಗಳು ಖಚಿತಪಡಿಸಿವೆ.

ಗಣತಿ ವೇಳೆ ಕೇಳಲಾಗುತ್ತಿದ್ದ ನಿಮ ಮನೆಯಲ್ಲಿ ಎಷ್ಟು ಕುರಿ ಮತ್ತು ಕೋಳಿಗಳಿವೆ, ಎಷ್ಟು ಚಿನ್ನ ಇದೆ, ಮನೆ ಸ್ವಂತದ್ದಾ, ನಿಮಗೆ ಜಮೀನು ಎಷ್ಟಿದೆ ಎಂಬ ಪ್ರಶ್ನೆಗಳಿಗೆ ಬ್ರೆಕ್ ಹಾಕುವಂತೆ ಗಣತಿದಾರರಿಗೆ ಸೂಚಿಸಲಾಗಿದೆ.

ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಕೇಂದ್ರ ಸಚಿವ ವಿ. ಸೋಮಣ್ಣ ಮತ್ತಿತರರು ಇಂತಹ ಇರಿಸು ಮುರಿಸು ಪ್ರಶ್ನೆ ಕೇಳುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಹೀಗಾಗಿ ಅಸಂಬದ್ಧ ಪ್ರಶ್ನೆ ಕೇಳದಂತೆ ಮೌಖಿಕವಾಗಿ ಸೂಚನೆ ನೀಡಲಾಗಿದೆ.

2.66 ಲಕ್ಷ ಕುಟುಂಬಗಳ ಸಮೀಕ್ಷೆ; ನಗರದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಆರಂಭದಿಂದಲೂ ಹಲವಾರು ವಿಘ್ನಗಳು ಎದುರಾಗಿದ್ದರೂ ಇದುವರೆಗೂ 2.66 ಲಕ್ಷ ಕುಟುಂಬಗಳ ಸಮೀಕ್ಷೆ ಪೂರ್ಣಗೊಳಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಳೆದ ಎರಡು ದಿನಗಳಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ–ಗತಿ ಸಮೀಕ್ಷೆ



ಕಾರ್ಯ ನಡೆಯುತ್ತಿದ್ದು, ಈವರೆಗೆ 2.66 ಲಕ್ಷ ಮನೆಗಳ ಸಮೀಕ್ಷೆ ನಡೆಸಲಾಗಿದೆ.

5 ನಗರ ಪಾಲಿಕೆಗಳಲ್ಲಿ ನಿನ್ನೆ ಸಂಜೆ 7 ಗಂಟೆಯವರೆಗೆ 1,41,442 ಮನೆಗಳನ್ನು ಸಮೀಕ್ಷೆ ನಡೆಸಲಾಗಿದೆ.ಸಮೀಕ್ಷಾದಾರರು ನಿಮ್ಮ ಮನೆಗಳಿಗೆ ಬರುವ ವೇಳೆ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಸಹಕರಿಸಬೇಕು ಎಂದು ಜಿಬಿಎ ಮನವಿ ಮಾಡಿಕೊಂಡಿದೆ.

ಆನ್‌ಲೈನ್ ಸೌಲಭ್ಯ: ನಾಗರಿಕರು ಸ್ವತಃ ಆನ್‌ಲೈನ್ ಮೂಲಕವೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ವೆಬ್ ಸೈಟ್ ಲಿಂಕ್: ಕೆಎಸ್‌ಸಿಬಿಸಿಸೆಲ್ಫ್ ಡಿಕ್ಲೆರೇಷನ್. ಕರ್ನಾಟಕ.ಗಾವ್‌ಇನ್ ಮೂಲಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದಾಗಿದೆ.

ಸಮೀಕ್ಷೆ ವಿವರ:1. ಕೇಂದ್ರ ನಗರ ಪಾಲಿಕೆ ಯಲ್ಲಿ 31,8152. ಪೂರ್ವ ನಗರ ಪಾಲಿಕೆ : 38,3743. ಉತ್ತರ ನಗರ ಪಾಲಿಕೆ : 68,6394. ದಕ್ಷಿಣ ನಗರ ಪಾಲಿಕೆ : 39,3155. ಪಶ್ಚಿಮ ನಗರ ಪಾಲಿಕೆ : 87,923

ದಿನಗಳಲ್ಲಿ ಸಮೀಕ್ಷೆಯಾದ ಒಟ್ಟು ಮನೆಗಳು: 2,66,066

# ಮುಂದಿನ ನಾಲ್ಕಾರು ತಿಂಗಳಲ್ಲಿ ರಾತ್ರಿ ವಿಮಾನ ಸಂಚಾರ ಕಾರ್ಯಾರಂಭಕ್ಕೆ ಕ್ರಮ : ನಂಜಯ್ಯನಮಠ್

**ಶಿವಮೊಗ್ಗ :** ಪ್ರಸ್ತುತ ಶಿವಮೊಗ್ಗದ ವಿಮಾನ ನಿಲ್ದಾಣದಲ್ಲಿ ಹಗಲು ಮಾತ್ರ ವಿಮಾನಯಾನ ಸೇವೆ ಲಭ್ಯವಿದ್ದು ಮುಂದಿನ ನಾಲ್ಕಾರು ತಿಂಗಳಲ್ಲಿ ರಾತ್ರಿ ವಿಮಾನ ಸಂಚಾರಕ್ಕೂ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ್ ಅವರು ಹೇಳಿದರು.

ಅವರು ಇಂದು ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳನ್ನು ಅವಲೋಕಿಸಿದ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ವಿವರ ನೀಡಿ ಮಾತನಾಡುತ್ತಿದ್ದರು. ವಿಮಾನ ನಿಲ್ದಾಣದಲ್ಲಿ ಬಾಕಿ ಇರುವ ಕೆಲವು ಸಿವಿಲ್ ಕಾಮಗಾರಿಗಳು, ಲೈಟಿಂಗ್ವ್ಯವಸ್ಥೆ ಮತ್ತು ನೈಟ್ ಲ್ಯಾಂಡಿಂಗ್ ಗೆ ಸಂಬಂಧಿಸಿದ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಈ ಕಾಮಗಾರಿ ಅತ್ಯಲ್ಪ ಅವಧಿಯಲ್ಲಿ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಮುಕ್ತವಾಗಲಿದೆ ಎಂದರು.

ವಿಮಾನ ನಿಲ್ದಾಣಕ್ಕೆ ಕಾಯ್ದಿರಿಸಲಾಗಿದ್ದ ವಿಶಾಲವಾದ ಭೂ 780ಎಕರೆ ಪ್ರದೇಶದಲ್ಲಿ ಸುಮಾರು 111 ಎಕರೆ ಭೂ ಪ್ರದೇಶವನ್ನು ಹೋಟೆಲ್, ಮಾಲ್ ಗಳ ನಿರ್ಮಾಣ ಮತ್ತು ವಾಣಿಜ್ಯ ಸಂಕೀರ್ಣಗಳ ನಿರ್ಮಾಣಕ್ಕೆ ಕನಿಷ್ಠ 30ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಉದ್ದೇಶಿಸಲಾಗಿದೆ. ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡ ಪ್ರದೇಶದಲ್ಲಿ ಪ್ರಯಾಣಿಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದರಿಂದಾಗಿ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಅಲ್ಲದೆ ಇಲ್ಲಿನ ಅನೇಕ ಬಾಕಿ ಇರುವ ಕೆಲಸಗಳನ್ನು ಗಮನಿಸಲಾಗಿದೆ. ಈ ಸಂಬಂಧ ಅಕ್ಟೋಬರ್ 17ರಂದು ಬೆಂಗಳೂರಿನಲ್ಲಿ ನಡೆಯಲಿರುವ ಆಡಳಿತ ಮಂಡಳಿ ಸಭೆಯಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದ ಅವರು ನುಡಿದರು.

ವಿಮಾನ ಸಂಚಾರ ಆರಂಭಗೊಂಡ ಮೊದಲ ವರ್ಷದಲ್ಲಿ 17000, ಎರಡನೇ ವರ್ಷದಲ್ಲಿ 92,000 ಹಾಗೂ ಪ್ರಸಕ್ತ ಸಾಲಿನಲ್ಲಿ 1,10ಲಕ್ಷ ಜನ ಪ್ರಯಾಣಿಕರು ವಿಮಾನದಲ್ಲಿ ಪ್ರಯಾಣಿಸಿದ್ದಾರೆ.

ಇದನ್ನು ಗಮನಿಸಿದಾಗ ವಿಮಾನಯಾನ ಬಳಸಿಕೊಳ್ಳುವವರ ಸಂಖ್ಯೆ ಗಣನೀಯ ಏರಿಕೆ ಕಂಡಿದೆ ಎಂದ ಅವರು, ಹೈದ್ರಾಬಾದ್, ಗೋವಾ, ಚೆನ್ನೈ, ತಿರುಪತಿ, ಬೆಂಗಳೂರು ಸೇರಿದಂತೆ ಕೇವಲ ಸೀಮಿತ ಸ್ಥಳಗಳಿಗೆ ಮಾತ್ರ ವಿಮಾನ ಸಂಚಾರವಿದ್ದು, ಅದನ್ನು ದೇಶದ ಬೇರೆ ಬೇರೆ ಸ್ಥಳಗಳಿಗೆ ವಿಸ್ತರಿಸುವ ಉದ್ದೇಶ ಹೊಂದಲಾಗಿದೆ ಎಂದರು.

ವಿಮಾನ ನಿಲ್ದಾಣದಲ್ಲಿ ತನಿಖಾ ತಂಡ ಸೂಚಿಸುವ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದ ಕಾರಣ ಕಳೆದ ಬಾರಿ ವಿಧಿಸಿದ್ದ 30ಲಕ್ಷ ರೂ.ಗಳನ್ನು ಪಾವತಿಸಬೇಕಾದ್ದು ಬಾಕಿ ಇದ್ದು, ಶೀಘ್ರದಲ್ಲಿ ಪಾವತಿಸಲು ಕ್ರಮ ವಹಿಸಲಾಗುವುದು. ಅಲ್ಲದೇ ಈ ಹಿಂದೆ ತನಿಖಾ ತಂಡ ಗುರುತಿಸಿದ್ದ ಎಲ್ಲಾ ಲೋಪಗಳನ್ನು ಈಗಾಗಲೇ ಸರಿಪಡಿಸಿಕೊಳ್ಳಲಾಗಿದೆ. ಈ ಬಾರಿ ತನಿಖಾ ತಂಡ ಭೇಟಿ ನೀಡಿ ಪರಿಶೀಲಿಸಿದಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ಪರವಾನಿಗೆ ನವೀಕರಣಗೊಳ್ಳಲಿದೆ ಎಂದರು.

ಈ ಹಿಂದೆ ವಿಮಾನ ನಿಲ್ದಾಣಕ್ಕೆ ಭೂಪ್ರದೇಶವನ್ನು ಬಿಟ್ಟುಕೊಟ್ಟ 371 ಭೂಮಾಲೀಕರಿಗೆ ನಿವೇಶನವನ್ನು ನೀಡಲು ಈ ಹಿಂದೆ ಸರ್ಕಾರವು ಒಪ್ಪಿಕೊಂಡಿತ್ತು. ಈ ಬಗ್ಗೆ ಭೂಮಾಲೀಕರು ಅನೇಕ ಬಾರಿ ಸರ್ಕಾರ ಮತ್ತು


ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಮಾಡಿಕೊಂಡಿದ್ದರು. ನಾಳೆಯಿಂದ ಪುನಃ ತಮ್ಮ ಬೇಡಿಕೆಯ ಈಡೇರಿಗೆ ಆಗ್ರಹಿಸಿ, ವಿಮಾನ ನಿಲ್ದಾಣದ ಎದುರು ಅನಿರ್ಧಿಷ್ಟಾಧಿ ಧರಣಿ ನಡೆಸುತ್ತಿರುವುದ ತಿಳಿದಿದ್ದು, ಸಂತ್ರಸ್ಥ ಕುಟುಂಬದವರಿಗೆ ನಿವೇಶನ ನೀಡಲು ಸಂಬಂಧಿಸಿದ ಇಲಾಖಾ ಮುಖ್ಯಸ್ಥರ ಗಮನಸೆಳೆಯಲಾಗುವುದು ಎಂದರು.

ಈ ಸಂದರ್ಭದಲ್ಲಿ ವಿಮಾನ ನಿಲ್ದಾಣ ಮುಖ್ಯಸ್ಥ ಕ್ಯಾ॥ ಶಮಂತ್ ಮತ್ತಿತರರು ಉಪಸ್ಥಿತರಿದ್ದರು.

# ಚಾರ್ಮಾಡಿ ಘಾಟ್‌ನಲ್ಲಿ ಲಾರಿ ಪಲ್ಟಿ, ಪ್ರಾಣಾಪಾಯದಿಂದ ಪಾರಾದ ಚಾಲಕ

**ಚಿಕ್ಕಮಗಳೂರು:** ಚಾಲಕನ ನಿಯಂತ್ರಣ ತಪ್ಪಿದ ಲಾರಿಯೊಂದು ಚಾರ್ಮಾಡಿ ಘಾಟ್‌ನಲ್ಲಿ ಪಲ್ಟಿಯಾದ ಘಟನೆ ನಡೆದಿದೆ.ಹಾಸನದಿಂದ ಮಂಗಳೂರಿನತ್ತ ಸಾಗುತ್ತಿದ್ದ ಲಾರಿ ಆರನೇ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಉರುಳಿದಿದೆ.

ಅಪಘಾತದಲ್ಲಿ ಲಾರಿ ಭಾಗಶಃ ಹಾನಿಯಾಗಿದ್ದು, ಚಾಲಕನಿಗೆ ಸಣ್ಣಪುಟ್ಟ



ಗಾಯಗಳಾಗಿವೆ. ಅದೃಷ್ಟವಶಾತ್ ಪ್ರಾಣಾಪಾಯದಿಂದ ಚಾಲಕ ಪಾರಾಗಿದ್ದಾನೆ. ಗಾಯಗೊಂಡ ಚಾಲಕನನ್ನು ತಕ್ಷಣ ಸ್ಥಳೀಯ ಆಸ್ಪತ್ರೆಗೆ ಸಾಗಿಸಲಾಗಿದ್ದು, ಚಿಕಿತ್ಸೆ ನೀಡಲಾಗಿದೆ.

ಅಪಘಾತದ ಪರಿಣಾಮವಾಗಿ ಕೆಲಕಾಲ ಟ್ರಾಫಿಕ್ ಅಸ್ತವ್ಯಸ್ತಗೊಂಡಿತ್ತು. ಬಳಿಕ ಪೊಲೀಸರ ಸಹಕಾರದಿಂದ ವಾಹನ ತೆರವುಗೊಳಿಸಿ ಸಂಚಾರವನ್ನು ಸರಳಗೊಳಿಸಲಾಯಿತು.

## ಅ.9, 10 ರಂದು ವಿಶೇಷ ಉಪನ್ಯಾಸ, ಪ್ರಶಸ್ತಿ ಪ್ರಧಾನ ಸಮಾರಂಭ

**ದಾವಣಗೆರೆ:** ಬಿದರೆ ನಾರಾಯಣರಾವ್ ದತ್ತಿ ಯೋಜನೆ ಅಡಿಯಲ್ಲಿ ವಿಶೇಷ ಉಪನ್ಯಾಸ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ ಬಿದರಿ ನಾರಾಯಣರಾವ್ ಮೆಮೋರಿಯಲ್ ಅವಾರ್ಡ್ ಇನ್ ಆರ್ಟ್ ಎಕ್ಸಲೆನ್ಸಿ ಕಾರ್ಯಕ್ರಮವನ್ನು 9ಮತ್ತು 10ರಂದು ಬೆಳಗ್ಗೆ 11 ಗಂಟೆಗೆ ದೃಶ್ಯಕಲಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ್ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಕಲಾವಿದ ಎ.ಎಂ ಪ್ರಕಾಶ್, ಕಲಾ ಇತಿಹಾಸಕಾರ ಮತ್ತು ವಿಮರ್ಶಕ ಕಿರಣ್ ಬಗಡೆ, ದತ್ತಿ ನಿಧಿ ದಾನಿಗಳಾದ ಹಿರಿಯ ಕಲಾವಿದ ಮತ್ತು ದೃಶ್ಯಕಲಾ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಶ್ರೀನಾಥ ಬಿದರೆ ಪಾಲ್ಗೊಳ್ಳಲಿದ್ದು,

ಮಹಾವಿದ್ಯಾಲಯದ ಪ್ರಾಂಶುಪಾಲ ಸತೀಶ ಕುಮಾರ್ ಪಿ. ವಲ್ಲೆಪುರಿ ಉಪಸ್ಥಿತರಿರುವರು. ಸಹಾಯಕ ಪ್ರಾಧ್ಯಾಪಕ ಡಾ ಜಯರಾಜ ಎಂ ಚಿಕ್ಕಪಾಟೀಲ, ಸಹ ಸಂಚಾಲಕ ಬೋಧನಾ ಸಹ ಪ್ರಾಧ್ಯಾಪಕರಾದ ದತ್ತಾತ್ರೇಯ ಎನ್ ಭಟ್ ಉಪಸ್ಥಿತರಿರುವರು.

ಅಂದು ಬೆಳಗ್ಗೆ 11 ರಿಂದ ಒಂದು ಗಂಟೆವರೆಗೆ ಪ್ರಶಸ್ತಿ ಪ್ರಧಾನ ಸಮಾರಂಭ ಮತ್ತು ಮಧ್ಯಾಹ್ನ 2:30 ರಿಂದ 5 ಗಂಟೆವರೆಗೆ ವಿದ್ಯಾರ್ಥಿಗಳು ಮತ್ತು ಕಲಾವಿದರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಲಿದೆ. ಅ.10 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಹಿರಿಯ ಕಲಾವಿದ ಎ.ಎಂ ಪ್ರಕಾಶ್ ಇವರಿಂದ ದೃಶ್ಯ ಭಾಷೆ ವಿಷಯ ಕುರಿತು ವಿಶೇಷ ಉಪನ್ಯಾಸ ನಡೆಯಲಿದೆ.

## ಪ್ರಶಸ್ತಿ ಪುರಸ್ಕೃತರಾದ ಜಾನ್ ಎಂ.ಮಾರ್ಟಿನಿಸ್, ಮೈಕಲ್ ಎಚ್ ಡೆವೊರೇಟ್ ಮತ್ತು ಜಾನ್ ಕ್ಲಾರ್ಕ್ ಮೂವರಿಗೆ ಭೌತವಿಜ್ಞಾನ ನೊಬೆಲ್

**ಸ್ಟಾಕ್‌ಹೋಮ್ :** 'ಕ್ವಾಂಟಮ್ ಮೆಕ್ಯಾನಿಕಲ್ ಟನಲಿಂಗ್' ಸಂಬಂಧಿತ ಮಹತ್ವದ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು 2025ನೇ ಸಾಲಿನ ಭೌತವಿಜ್ಞಾನ ಕ್ಷೇತ್ರದ ಪ್ರತಿಷ್ಠಿತ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ಘೋಷಿಸಿದೆ.

ಬ್ರಿಟನ್‌ನ ಜಾನ್ ಕ್ಲಾರ್ಕ್, ಫ್ರಾನ್ಸ್‌ನ ಮೈಕಲ್ ಎಚ್. ಡೆವೊರೆಟ್ ಮತ್ತು ಅಮೆರಿಕದ ಜಾನ್ ಎಂ. ಮಾರ್ಟಿನಿಸ್ ನೊಬೆಲ್ ಪುರಸ್ಕಾರವನ್ನು ಹಂಚಿಕೊಂಡಿದ್ದಾರೆ. ಈ ಮೂವರೂ ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನ ಉಪನ್ಯಾಸಕರಾಗಿದ್ದಾರೆ.

ಅಡ್ ನೊಬೆಲ್ ಅವರ ಪುಣ್ಯತಿಥಿ ಡಿ.10ರಂದು ನಡೆಯುವ ಅಂಗವಾಗಿಕಾರ್ಯಕ್ರಮದಲ್ಲಿ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರಧಾನ ನಡೆಯಲಿದೆ. ಪುರಸ್ಕಾರವು 1.2 ದಶಲಕ್ಷ ಡಾಲರ್ (ಅಂದಾಜು ಡಿರೂ 10.65 ಕೋಟಿ) ನಗದು ಪುರಸ್ಕಾರವನ್ನು ಒಳಗೊಂಡಿದೆ. ಕಾರ್ಯಕ್ರಮದಲ್ಲಿ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರಧಾನ ನಡೆಯಲಿದೆ. ಪುರಸ್ಕಾರವು 1.2 ದಶಲಕ್ಷ ಡಾಲರ್ (ಅಂದಾಜು ಡಿರೂ 10.65 ಕೋಟಿ) ನಗದು ಪುರಸ್ಕಾರವನ್ನು ಒಳಗೊಂಡಿದೆ.1901ರಿಂದ 2024ರವರೆಗೆ ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರಕ್ಕೆ 226 ವಿಜ್ಞಾನಿಗಳು ಪಾತ್ರರಾಗಿದ್ದಾರೆ. ಕೃತಕ ಬುದ್ಧಿಮತ್ತೆ ಕ್ಷೇತ್ರದ ಸಂಶೋಧನೆಗಳಿಗಾಗಿ ಕಳೆದ ಬಾರಿ ಜಾನ್ ಹಾಪ್‌ಫೀಲ್ಡ್ ಮತ್ತು ಜಾಫ್ರಿ ಹಿಂಟನ್ ಅವರಿಗೆ ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪುರಸ್ಕಾರ ಲಭಿಸಿತ್ತು.ಮೇರಿ ಬ್ರಂಕೋ, ಫ್ರೆಡ್ ರಾಮ್ ಡೆಲ್ ಹಾಗೂ ಜಪಾನ್‌ನ ಶಿಮೊನ್ ಸಕಾಗುಚಿ ಅವರಿಗೆ ಪ್ರಸಕ್ತ ಸಾಲಿನ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಸೋಮವಾರ ಘೋಷಣೆಯಾಗಿತ್ತು.

## ವಾಹನ ವಿಲೇವಾರಿ

**ಶಿವಮೊಗ್ಗ:** ಶಿವಮೊಗ್ಗ ತುಂಗಾನಗರ ಪೊಲೀಸ್ ಠಾಣೆಯಲ್ಲಿ ವಾರಸ್ಸುದಾರರು ಪತ್ತೆಯಾಗದ 45 ವಿವಿಧ ವಾಹನಗಳನ್ನು ಯಥಾ ಸ್ಥಿತಿಯಲ್ಲಿ ನ್ಯಾಯಾಲಯದ ಆದೇಶದನ್ವಯ ಅ.13 ರಂದು ಬೆಳಿಗ್ಗೆ 09 ಗಂಟೆಗೆ ತುಂಗಾನಗರ ಪೊಲೀಸ್ ಠಾಣಾ ಆವರಣದಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಹೆಚ್ಚಿನ ಮಾಹಿತಿಗೆ ತುಂಗಾನಗರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದೆಂದು ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆಪ್ಟೆಂಬರ್-2025 ರ ಅಂತ್ಯದವರೆಗೆ ರೂ 3,31,000/ ಅಭಿಸಂಧಾನ ದಂಡದ ಶುಲ್ಕ ವಸೂಲು

**ಗದಗ :** ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರು, ಗ್ರೇಡ್ -2 ಗದಗ ಜಿಲ್ಲೆ, ಗದಗ ಈ ಕಚೇರಿಯ ಸೆಪ್ಟೆಂಬರ್ -2025 ರ ಅಂತ್ಯದವರೆಗೆ ಸಾಧಿಸಿದ ಪ್ರಗತಿ ವಿವರಗಳು ಈ ಕೆಳಗಿನಂತಿವೆ.

ಗದಗ ಜಿಲ್ಲೆಯಲ್ಲಿ ಒಟ್ಟು ರೂ.59,16,653 ಸತ್ಯಾಪನೆ ಶುಲ್ಕ ಸಂಗ್ರಹಿಸಲಾಗಿದ್ದು, ಕಿರಾಣಿ ವ್ಯಾಪಾರಸ್ಥರು, ನ್ಯಾಯ ಬೆಲೆ ಅಂಗಡಿಗಳು, ಮತ್ತು ಚಿಲ್ಲರೆ ವ್ಯಾಪಾರಸ್‌ರ ಹಾಗೂ ಇನ್ನಿತರ ಒಟ್ಟು 517 ಅಂಗಡಿಗಳ ತಪಾಸಣೆ ಮಾಡಿ, ತಪ್ಪಿತಸ್ಥರ ವಿರುದ್ಧ ಒಟ್ಟು 121 ಮೊಕದ್ದಮೆಗಳನ್ನು ಹೂಡಲಾಗಿರುತ್ತದೆ. ಸದರಿ ಮೊಕದ್ದಮೆಗಳನ್ನು ಅಭಿಸಂಧಾನದ ಮೂಲಕ ಇತ್ಯರ್ಥ ಮಾಡಿ, ಸೆಪ್ಟೆಂಬರ -2025 ರ ಅಂತ್ಯದವರೆಗೆ ಒಟ್ಟು ರೂ3,31,000/- ಅಭಿಸಂಧಾನ ದಂಡದ ಶುಲ್ಕವನ್ನು ವಸೂಲು ಮಾಡಲಾಗಿದೆ. ಯಾವುದೇ ತೂಕ ಮತ್ತು ಅಳತೆಗೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ಗ್ರಾಹಕರು ಸಹಾಯಕ ನಿರ್ದೇಶಕರು ಗ್ರೇಡ್ -2 ಕಚೇರಿ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ, ಸಂಕಣ್ಣವರ ಬಡಾವಣೆ ಹತ್ತಿರ, ಗದಗ ಈ ವಿಳಾಸಕ್ಕೆ ದೂರು ಸಲ್ಲಿಸಬಹುದಾಗಿದೆ.

## ಅರ್ಜಿ ಆಹ್ವಾನ

**ಬಳ್ಳಾರಿ:** ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲೆಯ ಹಾಕಿ ಖೇಲೋ ಇಂಡಿಯಾ ಕೇಂದ್ರಕ್ಕೆ ಹಾಕಿ ತರಬೇತುದಾರರ ಆಯ್ಕೆ ಮಾಡಿಕೊಳ್ಳಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.ಕೇಂದ್ರ ಸರ್ಕಾರವು ಖೇಲೋ ಇಂಡಿಯಾ ಯೋಜನೆಯಡಿ ರಾಜ್ಯದಲ್ಲಿ 31 ಜಿಲ್ಲೆಗಳಲ್ಲಿ ಸಣ್ಣ ಖೇಲೋ ಇಂಡಿಯಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ರಾಷ್ಟ್ರ ಮಟ್ಟದ ಹಾಕಿ ಕ್ರೀಡಾಪಟುಗಳು ಎನ್.ಐ.ಎಸ್. ಡಿಪ್ಲೊಮಾ ಇನ್ ಹಾಕಿ ಅಥವಾ ಎಂಪೇಡ್ ಹಾಕಿ ಆಟದಲ್ಲಿ ವಿಶೇಷತೆ ಮತ್ತು ರಾಷ್ಟ್ರೀಯ ಪದಕ ವಿಜೇತ, ರಾಜ್ಯ ಪದಕ ವಿಜೇತ, ರಾಷ್ಟ್ರೀಯ ಮಟ್ಟದಲ್ಲಿ ಪ್ರಾತಿನಿಧ್ಯ ವಹಿಸಿದ ರಾಜ್ಯದವರು ಅರ್ಹರಾಗುತ್ತಾರೆ.

ಆಸಕ್ತ ಹಾಕಿ ತರಬೇತುದಾರರು ಅರ್ಜಿಗಳನ್ನು ಅಕ್ಟೋಬರ್ 15 ರೊಳಗಾಗಿ ಜಿಲ್ಲಾ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿಗೆ ಸಲ್ಲಿಸಬೇಕು.

# ಟಾಟಾ ಟ್ರಸ್ಟ್‌ನಲ್ಲಿ ಒಳಜಗಳ

## ಟಾಟಾ ಮತ್ತು ಮಿಸ್ತ್ರಿ ನೇತೃತ್ವದಲ್ಲಿ ಎರಡು ಗುಂಪುಗಳಾಗಿರುವ ಟಾಟಾ ಟ್ರಸ್ಟ್

**ನವದೆಹಲಿ:** ದೇಶದ ಅತ್ಯಂತ ಮೌಲ್ಯಯುತವಾದ ಉದ್ಯಮ ಸಮೂಹದ ಮೇಲೆ ನಿಯಂತ್ರಣ ಹೊಂದಿರುವ ಟಾಟಾ ಟ್ರಸ್ಟ್ ಟ್ರಸ್ಟಿಗಳ ನಡುವೆ ಸಂಘರ್ಷ ಶುರುವಾಗಿದೆ. ಆಡಳಿತಕ್ಕೆ ಸಂಬಂಧಿಸಿದ ವಿಚಾರಗಳು, ಆಡಳಿತ ಮಂಡಳಿಯ ನೇಮಕಾತಿಗಳು ಇದಕ್ಕೆ ಕಾರಣ ಎಂದು ಮೂಲಗಳು ಹೇಳಿವೆ.

ಟಾಟಾ ಸಮೂಹದ ಕಂಪನಿಗಳ ಮಾಲೀಕತ್ವ ಹೊಂದಿರುವ ಟಾಟಾ ಸನ್ಸ್‌ನಲ್ಲಿ ಟಾಟಾ ಟ್ರಸ್ಟ್, ಶೇಕಡ 66ರಷ್ಟು ಪಾಲು ಹೊಂದಿ ಹಾದೆ

ಟ್ರಸ್ಟ್ ನಲ್ಲಿ ಎರಡು . ಗುಂಪುಗಳಾಗಿವೆ, ಒಂದು ಗುಂಪು ಟ್ರಸ್ಟ್‌ನ ಅಧ್ಯಕ್ಷ ನೋಯಲ್ ಟಾಟಾ ಅವರೊಂದಿಗೆ ಗುರುತಿಸಿಕೊಂಡಿದೆ. ನಾಲ್ಕು ಮಂದಿ ಟ್ರಸ್ಟಿಗಳ ಇನ್ನೊಂದು ಗುಂಪು ಮೆಹಿ ಮಿಸ್ತ್ರಿ ಅವರೊಂದಿಗೆ ಗುರುತಿಸಿಕೊಂಡಿದೆ ಎಂದು ಮೂಲಗಳು ಹೇಳಿವೆ.

ಅವರು ಶಾಪೂರ್ಜಿ ಪಲ್ಲೊಂಜಿ ಕುಟುಂಬದ ಜೊತೆ ನಂಟು ಹೊಂದಿದ್ದಾರೆ. ಈ ಕುಟುಂಬವು ಟಾಟಾ ಸನ್ಸ್‌ನಲ್ಲಿ ಶೇ 18.37ರಷ್ಟು ಷೇರುಪಾಲು ಹೊಂದಿದೆ. ಪ್ರಮುಖ ವಿಚಾರಗಳಲ್ಲಿ ತಮಗೆ ಮಾಹಿತಿ ಒದಗಿಸುತ್ತಿಲ್ಲ ಎಂದು ಮಿಸ್ತ್ರಿ ಅವರು ಭಾವಿಸಿದ್ದಾರೆ ಎನ್ನಲಾಗಿದೆ.

ಬಿಕ್ಕಟ್ಟು ಶುರುವಾಗಲು ಮೂಲ ಕಾರಣ ಟಾಟಾ ಸನ್ಸ್‌ನ ಮಂಡಳಿಯ ಸ್ಥಾನಎಂದು ಮೂಲವೊಂದು ತಿಳಿಸಿದೆ. ಟಾಟಾ ಸಮೂಹದ ಸರಿಸುಮಾರು 400 ಕಂಪನಿಗಳ ಮೇಲೆ ಟಾಟಾ ಸನ್ಸ್ ನಿಯಂತ್ರಣ ಹೊಂದಿದೆ. ರೂ 400 ಕಂಪನಿಗಳಲ್ಲಿ 30 ಕಂಪನಿಗಳು ಷೇರುಪೇಟೆಯಲ್ಲಿ ನೋಂದಾಯಿತವಾಗಿವೆ.

ಟಾಟಾ ಟ್ರಸ್ಟ್‌ನ ಅರು ಮಂದಿ ಟ್ರಸ್ಟಿಗಳ ಸಭೆಯೊಂದರಲ್ಲಿ ಬಿಕ್ಕಟ್ಟು ಶುರುವಾಯಿತು. ಎಂಬುದು ದಾನ ಕಾರ್ಯದಲ್ಲಿ ತೊಡಗಿರುವ ಹಲವು ಟ್ರಸ್ಟ್‌ಗಳ ಒಕ್ಕೂಟದಂತಿದೆ. ಸೆಪ್ಟೆಂಬರ್ 11ರಂದು ನಡೆದ ಈ ಸಭೆಯು ಟಾಟಾ ಸನ್ಸ್ ಆಡಳಿತ ಮಂಡಳಿಗೆ ವಿಜಯ್ ಅವರನ್ನು ಮರುನೇಮಕ ಪರಿಗಣಿಸುವ ಹೊಂದಿತ್ತು. ನಿರ್ದೇಶಕರನ್ನಾಗಿ ಮಾಡುವುದನ್ನು ಕಾರ್ಯಸೂಚಿಯನ್ನು ಟಾಟಾ ಟ್ರಸ್ಟ್‌ನಲ್ಲಿ ಏಳು ಮಂದಿ ಟ್ರಸ್ಟಿ ಗಳು ಇದ್ದಾರೆ.ಸಿಂಗ್ ಅವರೂ ಒಬ್ಬಟ್ರಸ್ಟಿ,

ಸಿಂಗ್ ಅವರ ಮರುನೇಮಕದ ಪ್ರಸ್ತಾವವನ್ನು ಟ್ರಸ್ಟ್‌ನ ಅಧ್ಯಕ್ಷ ನೋಯಲ್ ಟಾಟಾ ಮತ್ತು ವೇಣು ಶ್ರೀನಿವಾಸನ್ (ಟಿವಿಎಸ್ ಸಮೂಹದ

ಗೌರವಾಧ್ಯಕ್ಷ) ಅವರು ಸಭೆಯಲ್ಲಿ ಮಂಡಿಸಿದರು. ಆದರೆ ಇದಕ್ಕೆ ಮೆಹಿ ಮಿಸ್ತ್ರಿ, ಪ್ರಮಿತ್ ಝಾವರಿ, ಜೆಹಾಂಗಿರ್ ಎಚ್‌ಸಿ ಜೆಹಾಂಗಿರ್ ಮತ್ತು ಡೇರಿಯಸ್ ಖಂಬಾಟ ವಿರೋಧ ವ್ಯಕ್ತಪಡಿಸಿದರು. ಹೀಗೆ ಪ್ರಸ್ತಾವ ತಿರಸ್ಕೃತಗೊಂಡಿತು.

ಇದಾದ ನಂತರ ನಾಲ್ಕು ಮಂದಿ ಟ್ರಸ್ಟಿಗಳು ಮೆಹಿ ಮಿಸ್ತ್ರಿ ಅವರನ್ನು ಟಾಟಾ ಸನ್ಸ್ ಆಡಳಿತ ಮಂಡಳಿಗೆ ನೇಮಕ ಮಾಡುವ ಪ್ರಸ್ತಾವ ಮಂಡಿಸಿದರು. ಆದರೆ ಇದಕ್ಕೆ ನೋಯಲ್ ಟಾಟಾ

ಮತ್ತು ವೇಣು ಶ್ರೀನಿವಾಸನ್ ವಿರೋಧ ದಾಖಲಿಸಿದರು. ನಂತರದಲ್ಲಿ ಸಿಂಗ್ ಅವರು 653650 ಆಡಳಿತ ಮಂಡಳಿಗೆ ರಾಜೀನಾಮೆ ನೀಡಿದರು.

ಟಾಟಾ ಟ್ರಸ್ಟ್‌ನ ಇನ್ನೊಂದು ಸಭೆಯು ಇದೇ 10ರಂದು ನಡೆಯಲಿದೆ.

ಅದರ ಕಾರ್ಯಸೂಚಿ ಗೊತ್ತಾಗಿಲ್ಲ. ಈ ಕುರಿತು ಪ್ರತಿಕ್ರಿಯಿಸಲು ಟಾಟಾ ಟ್ರಸ್ಟ್, ಟಾಟಾ ಸನ್ಸ್ ನಿರಾಕರಿಸಿವೆ. ವೇಣು ಶ್ರೀನಿವಾಸನ್, ಮೆಹ್ಲಿ ಮಿಸ್ತ್ರಿ ಅವರಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

### ಕೇಂದ್ರ ಸರ್ಕಾರದ ಮಧ್ಯ ಪ್ರವೇಶ?

ಟಾಟಾ ಟ್ರಸ್ಟ್ ನಲ್ಲಿನ ಒಳಜಗಳವು ಉದ್ಯಮ ಸಮೂಹದ ಕೆಲಸಗಳ ಮೇಲೆ ಪರಿಣಾಮ ಉಂಟುಮಾಡುವ ಭೀತಿ ಎದುರಾಗಿರುವ ಕಾರಣದಿಂದಾಗಿ ಕೇಂದ್ರ ಸರ್ಕಾರದ ಮಧ್ಯಪ್ರವೇಶವು ಅನಿವಾರ್ಯವಾಗಿದೆ ಎಂದು ಮೂಲಗಳು ಹೇಳಿವೆ.

'ಟಾಟಾ ಸಮೂಹವು ದೇಶದ ಅರ್ಥವ್ಯವಸ್ಥೆಯ ಪಾಲಿಗೆ ಎಷ್ಟೊಂದು ಮಹತ್ವದ್ದು ಎಂಬುದನ್ನು ಪರಿಗಣಿಸಿದಾಗ, ಒಬ್ಬ ವ್ಯಕ್ತಿಗೆ ಅದರ ಮೇಲೆ ನಿಯಂತ್ರಣ ಸಾಧಿಸಲು ಅವಕಾಶ ನೀಡಬಹುದೇ ಎಂಬುದು ಸರ್ಕಾರದ ಮುಂದಿರುವ ಮುಖ್ಯ ಪ್ರಶ್ನೆಯಾಗಿದೆ' ಎಂದು ಮೂಲವೊಂದು ಹೇಳಿದೆ.

ಟಾಟಾ ಸನ್ಸ್ ಕಂಪನಿಯನ್ನು ಸೆಪ್ಟೆಂಬರ್ 30ಕ್ಕೆ ಮೊದಲು ಷೇರುಪೇಟೆಯಲ್ಲಿ ನೋಂದಾಯಿಸಬೇಕು ಎಂದು ಆರ್‌ಬಿಐಗಡುವು ವಿಧಿಸಿತ್ತು, ಆದರೆ, ಇದರಿಂದ ವಿನಾಯಿತಿ ನೀಡುವಂತೆ ಕೋರಿ ಟಾಟಾಸನ್ಸ್ ಅರ್ಜಿ ಸಲ್ಲಿಸಿದ್ದು, ಅದು ಆರ್‌ಬಿಐ ಪರಿಶೀಲನೆಯಲ್ಲಿದೆ.

ಮಹಿ ಮಿಸ್ತ್ರಿ ನೇತೃತ್ವದಲ್ಲಿ ನಾಲ್ಕು ಮಂದಿ ಟ್ರಸ್ಟಿಗಳು, ಟಾಟಾ ಟ್ರಸ್ಟ್‌ನಲ್ಲಿ ನೋಯಲ್ ಟಾಟಾ ಅವರ ನಾಯಕತ್ವದ ಮಹತ್ವವನ್ನು ಕುಗ್ಗಿಸಲು ಯತ್ನಿಸುತ್ತಿದ್ದಾರೆ ಎಂದು ಸಮೂಹದಲ್ಲಿ ಕೆಲವರು ಭಾವಿಸಿದ್ದಾರೆ.

ನೋಯಲ್ ಟಾಟಾ, ಎನ್.ಚಂದ್ರಶೇಖರನ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮಂಗಳವಾರ ಭೇಟಿ ಮಾಡಿದ್ದಾರೆ.ವೇಣು ಶ್ರೀನಿವಾಸನ್, ಡೇರಿಯಸ್ ಖಂಬಾಟ ಅವರೂ ಈ ಭೇಟಿ ವೇಳೆ ಜೊತೆಗಿದ್ದರು.

# ಮೈಸೂರು : ಮಾರಕಾಸ್ತ್ರಗಳಿಂದ ಕೊಚ್ಚಿ ಹಾಡಹಗಲೇ ರೌಡಿಯ ಭೀಕರ ಕೊಲೆ

**ಮೈಸೂರು:** ಕಾರನ್ನು ತಡೆದ ಯುವಕರ ಗುಂಪೊಂದು ಹಾಡುಹಗಲೇ ರೌಡಿಯನ್ನು ಕಾರಿನಿಂದ ಹೊರಗೆಳೆದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ನಡು ರಸ್ತೆಯಲ್ಲೆ ಕೊಚ್ಚಿ ಕೊಲೆ ಮಾಡಿರುವ ಘಟನೆ ವಸ್ತು ಪ್ರದರ್ಶನ ಮೈದಾನದ ಬಳಿ ನಡೆದಿದೆ.

ಕ್ಯಾತಮಾರನಹಳ್ಳಿ ನಿವಾಸಿ ವೆಂಕಟೇಶ್ ಅಲಿಯಾಸ್ ಮುಖಾಮುಚ್ಚಿ ಅಲಿಯಾಸ್ ಗಿಲಿಗಿಲಿ ಕೊಲೆಯಾದ ರೌಡಿ.ಇಂದು ಮಧ್ಯಾಹ್ನ ಆತ ಕಾರಿನಲ್ಲಿ ಹೋಗುತ್ತಿದ್ದಾಗ ಯುವಕರ ಗುಂಪೊಂದು ಮೈಸೂರಿನ ವಸ್ತು ಪ್ರದರ್ಶನ ಬಳಿ ಕಾರು ಅಡ್ಡಗಟ್ಟಿ ಆತನನ್ನು ಕಾರಿನಿಂದ ಹೊರಗೆಳೆದು ತಲೆ, ಕೈ,ಕಾಲು ಹಾಗೂ ದೇಹದ ವಿವಿಧ ಭಾಗಗಳ ಮೇಲೆ ಮನ ಬಂದಂತೆ ಹಲ್ಲೆ ನಡೆಸಿ ಪರಾರಿಯಾಗಿದೆ. ಹಲ್ಲೆಯಿಂದ ನಡು ರಸ್ತೆಯಲ್ಲೆ ರೌಡಿ ವೆಂಕಟೇಶ್ ಕೊನೆಯುಸಿರೆಳೆದಿದ್ದಾರೆ.

ಸುದ್ದಿ ತಿಳಿದು ನಜರ್‌ಬಾದ್‌ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಪರಿಶೀಲಿಸಿದ್ದಾರೆ.

ಸ್ಥಳಕ್ಕೆ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರರಾಜ್ ಭೇಟಿ ನೀಡಿದ್ದಾರೆ.

ಇತ್ತೀಚೆಗೆ ವರುಣಾ ಗ್ರಾಮದ ಹೋಟೆಲ್ ಮುಂಭಾಗ ಕ್ಯಾತಮಾರನಹಳ್ಳಿಯ ರೌಡಿ ಶೀಟರ್ ಕಾರ್ತಿಕ್ ಎಂಬಾತನ ಕೊಲೆಗೆ ಪ್ರತಿಕಾರವಾಗಿ ಇಂದು ವೆಂಕಟೇಶ್ ಕೊಲೆ ನಡೆದಿರಬಹುದೇ ಎಂಬ ಶಂಕೆ ವ್ಯಕ್ತವಾಗಿದೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಘಟನಾ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿಸಿ ಕ್ಯಾಮರಗಳನ್ನು ಪರಿಶೀಲಿಸಿ, ಹಂತಕರ ಪತ್ತೆಗೆ ಬಲೆ ಬೀಸಿದ್ದಾರೆ. ಹಾಡುಹಗಲೇ ನಡು ರಸ್ತೆಯಲ್ಲಿ ಭೀಕರ ಕೊಲೆ ಮಾಡಿರುವುದನ್ನು ಕಂಡ ಸಾರ್ವಜನಿಕರು ಭಯಭೀತರಾಗಿದ್ದಾರೆ.

# ಇನ್ ಸೈಟ್ ಅಕಾಡೆಮಿ ಕಾರ್ಯ ಶ್ಲಾಘನೀಯ: ಮೆಣಸಗಿ



**ಗದಗ:** ಇತ್ತೀಚೆಗೆ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ನಗರದ ಮೈಲಾರಪ್ಪ ಮೆಣಸಗಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಈ ಸಾಧನೆಗೆ ಆದಿಯೋಗಿ ಎಜುಕೇಷನಲ್ ಟ್ರಸ್ಟ್ ನ ಸಹ ಸಂಸ್ಥೆಯಾದ ಇನ್ಸೈಟ್ ಅಕಾಡೆಮಿ ಕಾರಣವಾಗಿದ್ದು, ವಿದ್ಯಾರ್ಥಿಗಳಿಗೆ ನಿರಂತರ ತರಬೇತಿ ನೀಡಿ ಪ್ರೋತ್ಸಾಹಿಸಿದ್ದಾರೆ. ಹೀಗಾಗಿ ಇನ್ಸ್ ಸೈಟ್ ಅಕಾಡೆಮಿಯ ಕಾರ್ಯ ಶ್ಲಾಘನೀಯ ಎಂದು ಮೈಲಾರಪ್ಪ ಮೆಣಸಗಿ ಮೆಮೋರಿಯಲ್ ಟ್ರಸ್ಟ್ ಕಾರ್ಯಾಧ್ಯಕ್ಷ ಡಾ. ಜಯದೇವ ಮೆಣಸಗಿ ಹೇಳಿದರು.

ಅವರು ನಗರದ ಮೈಲಾರಪ್ಪ ಮೆಣಸಗಿ ಪದವಿ ಪೂರ್ವ ಕಾಲೇಜಿನಲ್ಲಿ ಉತ್ತಮ ಕ್ರೀಡಾ ಸಾಧನೆ ಮೂಲಕ ರಾಜ್ಯಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡಿದರು.

ಮಕ್ಕಳಲ್ಲಿ ಪಠ್ಯದಷ್ಟೇ, ಪಠ್ಯೇತರ ಚಟುವಟಿಕೆಗಳ ಬಗ್ಗೆ ಆಸಕ್ತಿ ಮೂಡಬೇಕು. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಮಾನ ಆದ್ಯತೆ ನೀಡಿದಾಗ ಮಾತ್ರ ವಿದ್ಯಾರ್ಥಿ ಸರ್ವಾಂಗೀಣ ವ್ಯಕ್ತಿತ್ವ ವಿಕಾಸವಾಗಲು ಸಾಧ್ಯ ಎಂದು ಹೇಳಿದರು.

ಬಾಲಕರ ಮತ್ತು ಬಾಲಕೀಯರ ಶೆಟಲ್ ಬ್ಯಾಟ್ ಮಿಟನ್, ಈಜು, ಮತ್ತು ಬಾಲಕರ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ ಯಾಗಿದ್ದು, ರಾಜ್ಯಮಟ್ಟದಲ್ಲಿಯೂ ಉತ್ತಮ ಸಾಧನೆ ತೋರಲಿ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಕ್ರೀಡಾ ತರಬೇತಿ ನೀಡಿದ ಪ್ರಾಧ್ಯಾಪಕ ಹಾಗೂ ಇನ್ ಸೈಟ್ ಅಕಾಡೆಮಿಯ ವಸಿಮ್ ರಾಜ್ ದೊಡ್ಡಮನಿ ಹಾಗೂ ರಾಜ್ಯಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಆದಿಯೋಗಿ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಶ್ರೀಕಾಂತಗೌಡ ಪಾಟೀಲ್, ಪವನ್ ಕುಮಾರ್ ಶೇಠ್, ಕುಮಾರ್ ರಾಥೋಡ್, ಎನ್. ಎಂ. ಮುಲ್ಲಾ, ನದೀಮ್ ಮುಲ್ಲಾ, ವಸೀಂ ರಾಜ್ ದೊಡ್ಡಮನಿ ಪ್ರಾಚಾರ್ಯ ಶರತ್ ಕುಮಾರ್ ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು.

# ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ: ಫಲಿತಾಂಶ ಪ್ರಕಟ

**ರಾಮನಗರ:** ರಾಷ್ಟ್ರಪಿತ ಮಹಾತ್ಮ ಗಾಂಧೀ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಪ್ರೌಢಶಾಲೆ, ಪದವಿ ಪೂರ್ವ ಮತ್ತು ಪದವಿ/ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ತಲಾ 3 ವಿದ್ಯಾರ್ಥಿಗಳನ್ನು ಪ್ರಶಸ್ತಿಗಾಗಿ ಆಯ್ಕೆ ಮಾಡಲಾಗಿದೆ.ಬಾಪೂಜಿ ಪ್ರಬಂಧ ಸ್ಪರ್ಧೆಯ 3 ವಿಭಾಗಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಆಯ್ಕೆಗೊಂಡಿರುವ ವಿದ್ಯಾರ್ಥಿಗಳ ವಿವರ:


ಪ್ರೌಢಶಾಲಾ ವಿಭಾಗ: ಮಾಗಡಿ ತಾಲ್ಲೂಕಿನ ಸಂಕೀಘಟ್ಟದ ಸರ್ಕಾರಿ ಪ್ರೌಢಶಾಲೆಯ ಯಶಸ್ವಿನಿ ಎಸ್.ಎಲ್. ಪ್ರಥಮ ಸ್ಥಾನ, ಮಾಗಡಿ ಟೌನಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾಶ್ರೀ ಎಚ್. ಎನ್ ದ್ವಿತೀಯ, ರಾಮನಗರ ಟೌನಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಹೇಮಶ್ರೀ ತೃತೀಯ ಸ್ಥಾನ ಪಡೆದಿರುತ್ತಾರೆ.ಪದವಿ ಪೂರ್ವ ವಿಭಾಗ: ಚನ್ನಪಟ್ಟಣ ತಾಲ್ಲೂಕಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಲಿಖಿತ ಎಸ್. ಪ್ರಥಮ ಸ್ಥಾನ, ಹಾರೋಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಲೇಖನಗಂಗ ದ್ವಿತೀಯ ಸ್ಥಾನ, ಬಿಡದಿಯ ಶ್ರೀ ಬಸವೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಸಿಂಚನ ತೃತೀಯ ಸ್ಥಾನ ಪಡೆದಿರುತ್ತಾರೆ. ಪದವಿ/ಸ್ನಾತಕೋತ್ತರ ಪದವಿ ವಿಭಾಗ: ರಾಮನಗರದ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನ ದೇವಿಕಾ ಎಚ್. ಕೆ. ಪ್ರಥಮ ಸ್ಥಾನ, ರಾಮನಗರದ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನ ವರ್ಷಿತಾ ದ್ವಿತೀಯ ಸ್ಥಾನ ಹಾಗೂ ರಾಮನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಿಶ್ರುತ ತೃತೀಯ ಸ್ಥಾನ ಗಳಿಸಿರುತ್ತಾರೆ.ಈ ಮೂರು ವಿಭಾಗಗಳಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಅ. 2 ರಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿಯಂದು ನಗದು ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗಿರುವ ಪ್ರಬಂಧಗಳನ್ನು ರಾಜ್ಯ ಮಟ್ಟದ ಆಯ್ಕೆ ಸ್ಪರ್ಧೆಗೆ ಕೂಡ ಕಳುಹಿಸಲಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ರವಿರಾಜ್ ಎಚ್.ಜಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಮಾಚಲ ಪ್ರದೇಶ : ಬಸ್ ಮೇಲೆ ಗುಡ್ಡ ಕುಸಿದು 15 ಪ್ರಯಾಣಿಕರ ಸಾವು

**ಶಿಮ್ಲಾ:** ಪ್ರಯಾಣಿಕರಿದ್ದ ಖಾಸಗಿ ಬಸ್ ಮೇಲೆ ಪರ್ವತ ಕುಸಿದು ಬಿದ್ದ ಪರಿಣಾಮ 15 ಮಂದಿ ಸಾವನ್ನಪ್ಪಿ ಇತರ ಹಲವಾರು ಮಂದಿ ಗಾಯಗೊಂಡಿರುವ ಘಟನೆ ಹಿಮಾಚಲ ಪ್ರದೇಶದ ಬಿಲಾಸ್ಪುರ ಜಿಲ್ಲೆಯಲ್ಲಿ ಸಂಭವಿಸಿದೆ. ಬೆರ್ಥಿನ್ ಬಳಿಯ ಭಾಲುಘಾಟ್ ಪ್ರದೇಶದಲ್ಲಿ ಪರ್ವತದ ದೊಡ್ಡ ಭಾಗವು ಕುಸಿದು ಸುಮಾರು 25 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಬಸ್ ಮೇಲೆ ಬಿದ್ದಿದ್ದರಿಂದ ಈ ದುರಂತ ಸಂಭವಿಸಿದೆ.

ಬಸ್ ಮರೋಟನ್‌ನಿಂದ ಘುಮಾರ್ವಿನ್‌ಗೆ ತೆರಳುತ್ತಿತ್ತು. ಇದುವರೆಗೆ ಹದಿನೈದು ಶವಗಳನ್ನು ಹೊರತೆಗೆಯಲಾಗಿದೆ. ಒಂದು ಮಗು ಸೇರಿದಂತೆ ಕೆಲವೇ ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಶಂಕೆ ಇದ್ದು, ಅವರ ಬದುಕುಳಿಯುವ ಭರವಸೆ ಮಸುಕಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೃತರನ್ನು ನಕ್‌ಲ್ , ಆರವ್, ಸಂಜೀವ್, ವಿಮ್ಲಾ, ಕಮಲೇಶ್, ಕಾಂತಾ ದೇವಿ, ಅಂಜನಾ, ಬಕ್ಷಿ ರಾಮ್, ನರೇಂದ್ರ ಶರ್ಮಾ, ಕ್ರಿಶನ್ ಲಾಲ್, ಚುನಿ ಲಾಲ್, ರಜನೀಶ್, ಸೋನು, ಷರೀಫ್ ಖಾನ್ ಮತ್ತು ಪ್ರವೀಣ್ ಕುಮಾರ್ ಎಂದು ಗುರುತಿಸಲಾಗಿದೆ.ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ. ರಕ್ಷಿಸಲ್ಪಟ್ಟವರಲ್ಲಿ ಆರುಷಿ ಮತ್ತು ಶೌರ್ಯ ಎಂಬ ಇಬ್ಬರು ಸಹೋದರಿಯರು ಸೇರಿದ್ದಾರೆ ಮತ್ತು ಅವರು ಬಿಲಾಸ್ಪುರದ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕುಲ್ಲು ದಸರಾದಲ್ಲಿ ಭಾಗವಹಿಸುತ್ತಿದ್ದ ಉಪಮುಖ್ಯಮಂತ್ರಿ ಮುಖೇಶ್ ಅಗ್ನಿಹೋತ್ರಿ ತಡರಾತ್ರಿ ಕುಲ್ಲುವಿನಿಂದ ಅಪಘಾತ ಸ್ಥಳಕ್ಕೆ ದೌಡಾಯಿಸಿ ರಕ್ಷಣಾ ಕಾರ್ಯಾಚರಣೆಗಳನ್ನು ಪರಿಶೀಲಿಸಿದರು.



ಅವರು ಬಲಿಪಶುಗಳ ಕುಟುಂಬಗಳನ್ನು ಸಹ ಭೇಟಿ ಮಾಡಿದರು.ಇಲ್ಲಿ ಬರ್ತಿನ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುವುದು ಮತ್ತು ಬೆಳಿಗ್ಗೆ 10:30 ರಿಂದ 11:00 ರೊಳಗೆ ಮೃತರ ಕುಟುಂಬ ಸದಸ್ಯರಿಗೆ ಶವಗಳನ್ನು ಹಸ್ತಾಂತರಿಸಲು ಅಧಿಕೃತ ಪೊಲೀಸ್ ಕೆಲಸವನ್ನು ಇಲ್ಲಿ ಪೂರ್ಣಗೊಳಿಸಲಾಗುವುದು ಎಂದು ಅವರು ಹೇಳಿದರು.

ಕಳೆದ ಎರಡು ದಿನಗಳಿಂದ ಮಳೆಯಾಗುತ್ತಿದ್ದು, ಮಳೆಯ ನಂತರ ಪರ್ವತ ಜಾರುವಿಕೆಯಿಂದ ಅಪಘಾತ ಸಂಭವಿಸಿದೆ ಎಂಬುದು ಸ್ಪಷ್ಟವಾಗಿದೆ, ಆದರೆ ಘಟನೆಯ ಬಗ್ಗೆ ಮ್ಯಾಜಿಸ್ಟ್ರಿಯಲ್ ತನಿಖೆಗೆ ಆದೇಶಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದರು. ಕಳೆದ ಎರಡು ದಿನಗಳಿಂದ ಮಳೆಯಾಗುತ್ತಿದ್ದು, ಮಳೆಯ ನಂತರ ಪರ್ವತ ಜಾರುವಿಕೆಯಿಂದ ಅಪಘಾತ ಸಂಭವಿಸಿದೆ ಎಂಬುದು ಸ್ಪಷ್ಟವಾಗಿದೆ, ಆದರೆ ಘಟನೆಯ ಬಗ್ಗೆ ಮ್ಯಾಜಿಸ್ಟ್ರಿಯಲ್ ತನಿಖೆಗೆ ಆದೇಶಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಹಿಮಾಚಲ ಪ್ರದೇಶವು ಯುವ ಪರ್ವತಗಳನ್ನು ಹೊಂದಿರುವ ಗುಡ್ಡಗಾಡು ರಾಜ್ಯವಾಗಿದ್ದು, ದೊಡ್ಡ ರಸ್ತೆಗಳು, ಸೇತುವೆಗಳು ಮತ್ತು ಸುರಂಗಗಳ ನಿರ್ಮಾಣ ಕಾರ್ಯಗಳು ನಡೆಯುತ್ತಿವೆ ಮತ್ತು ಪ್ರಸ್ತುತ ಅಭಿವೃದ್ಧಿ ಮಾದರಿ ಸುಸ್ಥಿರವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಅವರು ಹೇಳಿದರು, 2023 ರಿಂದ ವಿಪತ್ತುಗಳಿಂದಾಗಿ ಹಿಮಾಚಲ ಪ್ರದೇಶವು 20,000 ರೂ.ಗಳಷ್ಟು ನಷ್ಟವನ್ನು ಅನುಭವಿಸಿದೆ.

ಸೋಮವಾರದಿಂದ ಈ ಪ್ರದೇಶವು ನಿರಂತರ ಮಳೆಯಿಂದ ತುಂತುರು ಮಳೆಯಾಗಿದ್ದು, ದುರ್ಬಲವಾದ ಪರ್ವತ ಇಳಿಜಾರುಗಳು ಅಸ್ಥಿರವಾಗಿವೆ.ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪ್ರಧಾನಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ಜೆ ಪಿ ನಡ್ಡಾ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ (ಪಿಎಂಎನ್‌ಆರ್‌ಎಫ್) ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ.ಗಳ ಪರಿಹಾರವನ್ನು ಮೋದಿ ಘೋಷಿಸಿದರು ಮತ್ತು ಗಾಯಾಳುಗಳಿಗೆ ತಲಾ 50,000 ರೂ.ಗಳ ಪರಿಹಾರವನ್ನು ನೀಡಲಾಗುವುದು. ಹಿಮಾಚಲ ಪ್ರದೇಶದ ಬಿಲಾಸ್ಪುರದಲ್ಲಿ ಸಂಭವಿಸಿದ ಅಪಘಾತದಿಂದ ಜೀವಹಾನಿಯಾಗಿದೆ. ಈ ಕಷ್ಟದ ಸಮಯದಲ್ಲಿ ಸಂತ್ರಸ್ತ ಜನರು ಮತ್ತು ಅವರ ಕುಟುಂಬಗಳೊಂದಿಗೆ ನನ್ನ ಆಲೋಚನೆಗಳು ಇವೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮೋದಿ ಎಕ್ಸ್ ನಲ್ಲಿ ಬರೆದಿದ್ದಾರೆ.

ರಕ್ಷಣಾ ಕಾರ್ಯಾಚರಣೆಯಲ್ಲಿ ಸಹಾಯ ಮಾಡುತ್ತಿದ್ದ ಪ್ರತ್ಯಕ್ಷದರ್ಶಿಯೊಬ್ಬರು ಬಸ್ ಮೇಲೆ ಸಂಪೂರ್ಣ ಪರ್ವತ ಕುಸಿದು ಬಿದ್ದಿದೆ ಎಂದು ಹೇಳಿದರು.ದುರಂತ ಸಂಭವಿಸಿದಾಗ ನನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳು, ಮತ್ತು ನನ್ನ ಸಹೋದರನ ಹೆಂಡತಿ ಮತ್ತು ಅವರ ಇಬ್ಬರು ಮಕ್ಕಳು ಸಮಾರಂಭದಿಂದ ಮನೆಗೆ ಮರಳುತ್ತಿದ್ದರು.

ನನ್ನ ಮಕ್ಕಳು ಜೀವಂತವಾಗಿದ್ದಾರೆ ಎಂದು ಬಿಲಾಸ್ಪುರದ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜ್ ಕುಮಾರ್ ಹೇಳಿದರು.ಜೆಸಿಬಿಗಳು ಮತ್ತು ಕ್ರೇನ್‌ಗಳು ಕಾರ್ಯಪ್ರವೃತ್ತವಾಗಿರುವ ರಕ್ಷಣಾ ಕಾರ್ಯಾಚರಣೆಯ ವೀಡಿಯೊಗಳು ಆನ್‌ಲೈನ್‌ನಲ್ಲಿ ಹರಿದಾಡುತ್ತಿವೆ. ಘಟನೆಯ ಬಗ್ಗೆ ದುಃಖ ವ್ಯಕ್ತಪಡಿಸಿದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು, ರಕ್ಷಣಾ ಕಾರ್ಯಾಚರಣೆಯನ್ನು ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

# ಅಭಿಪ್ರಾಯ ತಿರುಚಿ ಹಂಚಿಕೆ'

## ಅರ್ಜಿಯೊಂದರ ವಿಚಾರಣೆ ವೇಳೆ ಹಿಂದಿನ ಘಟನೆ ನೆನಪಿಸಿಕೊಂಡ ಸಿಜೆಐ ಗವಾಯಿ

**ನವದೆಹಲಿ :** 'ಪ್ರಕರಣ ವೊಂದರ ವಿಚಾರಣೆ ವೇಳೆ ನ್ಯಾಯ ಮೂರ್ತಿಗಳ ಮಾತುಗಳನ್ನು ತಪ್ಪು ಅರ್ಥ ಬರುವಂತೆ ಸಾಮಾಜಿಕ ಜಾಲ ತಾಣಗಳಲ್ಲಿ ಹಂಚಿ-ಕೊಳ್ಳಲಾಗುತ್ತಿದೆ' ಸುಪ್ರಿಂ ಕೋರ್ಟ್‌ನ ಮುಖ್ಯ ಬಿ.ಆರ್‌ಗವಾಯಿ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರು ಮಂಗಳವಾರ ಕಳವಳ ವ್ಯಕ್ತಪಡಿಸಿದರು.

ಮಂಗಳವಾರ ಅರ್ಜಿಯೊಂದರ ವಿಚಾರಣೆ ನಡೆಸುತ್ತಿದ್ದ ವೇಳೆ ಸಿಜೆಐ ಗವಾಯಿ ಅವರು ಕೆಲವು ದಿನಗಳ ಹಿಂದೆ ನಡೆದಿದ್ದ ಘಟನೆಯೊಂದನ್ನು ನೆನಪಿಸಿಕೊಂಡರು.

'ಪ್ರಕರಣವೊಂದಕ್ಕೆ ಸಂಭದಿಸಿದ ವಿಚಾರಣೆಯ ವೇಳೆ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿಗೆ ಏನೋ ಹೇಳುವುದಿತ್ತು. ಅವರನ್ನು ತಡೆದೆ. ಇಲ್ಲದೇ ಇದ್ದಿದ್ದರೆ, ಅವರ ಹೇಳಿಕೆಯನ್ನು ತಪ್ಪು ಅರ್ಥ ಬರುವಂತೆ ಸಾಮಾಜಿಕ ಜಾಲತಾಣ ಹಂಚಿಕೊಳ್ಳಲಾಗುತ್ತಿತ್ತು' ಎಂದರು. ನಾನು

'ನಿಮ್ಮ ಅಭಿಪ್ರಾಯವನ್ನು ನನ್ನ ಕಿವಿಯಲ್ಲಿ ಮಾತ್ರವೇ ಹೇಳಿ ಎಂದು ನಾನು ಅವರಲ್ಲಿ ವಿನಂತಿಸಿಕೊಂಡಿದ್ದೆ' ಎಂದರು.

ಸೋಮವಾರವಷ್ಟೇ ಸಿಜೆಐ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಅವರು ಶೂ ಎಸೆಯುವ ಯತ್ನ ನಡೆಸಿದ್ದರು. ಭಗ್ನಗೊಂಡಿದ್ದ ವಿಷ್ಣು ಮೂರ್ತಿಯನ್ನು ಮರುಸ್ಥಾಪಿಸುವ ಕುರಿತ ಅರ್ಜಿಯ ವಿಚಾರಣೆ ವೇಳೆ ಸಿಜೆಐ ಗವಾಯಿ ಅವರು ಆಡಿದ್ದ ಮಾತುಗಳನ್ನು ಸಾಮಾಜಿಕ ಜಾಲತಾಣ ಗಳಲ್ಲಿ ಹಂಚಿಕೊಳ್ಳಲಾಗಿತ್ತು, ಇದಕ್ಕೆ ವಿರೋಧವೂ ವ್ಯಕ್ತವಾಗಿತ್ತು. 'ಗವಾಯಿ ಅವರ ಹೇಳಿಕೆಯು ನನಗೆ ಅಸಮಾಧಾನ ತರಿಸಿತ್ತು' ಎಂದು ರಾಕೇಶ್ ಹೇಳಿದ್ದರು.



> **ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗದ ಘನತೆ, ಸ್ವಾತಂತ್ರ್ಯ ಬಹಳ ಮುಖ್ಯ. ಇಂಥ ವ್ಯವಸ್ಥೆ ಮೇಲೆ ಕೈ ಎತ್ತುವುದು ಎಂದರೆ, ಅದು ಸಂವಿಧಾನದ ವಿರುದ್ಧ ನಡೆದಂತೆ**
> **– ಹೇಮಂತ್ ಸೊರೇನ್. ಜಾರ್ಖಂಡ್ ಮುಖ್ಯಮಂತ್ರಿ**

> **ವಿಕಸಿತ ಭಾರತ ಹೇಗಿರಲಿದೆ ಎನ್ನುವುದಕ್ಕೆ ಸಿಜೆಐ ಮೇಲೆ ಶೂ ಎಸೆಯಲು ಯತ್ನಿಸಿದ್ದೇ ಸ್ಪಷ್ಟ ಚಿತ್ರಣ ನೀಡುತ್ತದೆ. ತನಗೆ ಏನೂ ಆಗುವುದಿಲ್ಲ. ಎನ್ನುವ ಅತೀವ ಭರವಸೆ ಇದ್ದೇ ವಕೀಲ ಇಂಥ ಕೃತ್ಯ ಎಸಗಿದ್ದಾರೆ**
> **– ಮೆಹಬೂಬಾ ಮುಫ್ತಿ, ಸಿಡಿಪಿ ಮುಖ್ಯಸ್ಥೆ.**

### 'ಕ್ರಿಮಿನಲ್ ನ್ಯಾಯಾಂಗ ನಿಂದನೆ ದಾಖಲಿಸಲು ಅನುಮತಿ ನೀಡಿ'

'ನಿಮ್ಮ (ಸಿಜೆಐ ಗವಾಯಿ) ಎದೆ ಸೀಳಬೇಕು ಎನ್ನುವ ಬಯಕೆ ಇದ್ದರೆ ನನಗೆ " ಹೇಳಿದ್ದೆ ಎಂದು ಸೆ.12 ರಂದು ಧಾರ್ಮಿಕ ಭಾಷಣಕಾರ ಅನಿರುದ್ಧಾಚಾರ್ಯ (ಅನಿರುದ್ಧ ರಾಮ್ ತಿವಾರಿ) ಹೇಳಿದ್ದರು. ಅದೇತ್ ಭಾರತಿ ಎಂಬ ಯೂಟ್ಯೂಬರ್ ಸಿಜೆಐ ಗವಾಯಿ ಅವರ ವಿರುದ್ಧ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ" ಎಂದು 'ಏ ಮಿಷನ್ ಅಂಬೇಡ್ಕರ್ ಸಂಸ್ಥೆಯ ಸ್ಥಾಪಕ ಸೂರಜ್ ಕುಮಾರ್ ಬದ್ಧ ಆರೋಪಿಸಿದ್ದಾರೆ.

ಈ ಇಬ್ಬರ ಹೇಳಿಕೆಯನ್ನು ಉಲ್ಲೇಖಿಸಿ, ಇವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ಕೋರಿ ಆಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂರಜ್ ಕುಮಾರ್ ಬುದ್ಧ ಅವರು ಪತ್ರ ಬರೆದಿದ್ದಾರೆ.

'ಇಂಥ ಹೇಳಿಕೆಗಳು ಸಿಜೆಐ ಗವಾಯಿ ಅವರು ವಿರುದ್ಧ ಹಿಂಸೆಗೆ ಪ್ರಚೋದನೆ ನೀಡಿವೆ. ಇದು ಬಹಳ ಅಪಾಯಕಾರಿಯಾದುದು. ಈ ಇಬ್ಬರ ಹೇಳಿಕೆಗಳು ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡಿವೆ' ಎಂದು ಪತ್ರದಲ್ಲಿ ಹೇಳಲಾಗಿದೆ.

'ಸಿಜೆಐ ಅವರತ್ತ ಶೂ ಎಸೆಯಲು ಯತ್ನಿಸಿದ ವರ್ತನೆಯು ಸುಪ್ರೀಂ ಕೋರ್ಟ್‌ನ ಇತಿಹಾಸದಲ್ಲಿಯೇ ಎಂದೂ ನಡೆದಿರಲಿಲ್ಲ. ಇಂಥ ವ್ಯಕ್ತಿಯನ್ನು ಕಾನೂನಿನಡಿ ತರಬೇಕು. ಇಲ್ಲವಾದಲ್ಲಿ ಪ್ರಜಾಪ್ರಭುತ್ವದ ಮೂಲಾಧಾರವಾದ ನ್ಯಾಯಾಂಗದ ಸ್ವಾತಂತ್ರ್ಯಕ್ಕೇ ಗಂಡಾಂತರ ಒದಗುತ್ತದೆ' ಎಂದು ಪತ್ರದಲ್ಲಿ ಹೇಳಲಾಗಿದೆ.

### ಶೂ ಎಸೆಯಲು ಯತ್ನ ಪ್ರಕರಣ: ಎಲ್ಲೆಡೆ ಆಕ್ರೋಶ

'ಜೀವನ ಸವೆಸಿ ಸಿಜೆಐನಂಥ ಸಾಂವಿಧಾನಿಕವಾದ ದೊಡ್ಡ ಹುದ್ದೆ ಯನ್ನೇರಿದ ಬಳಿಕವೂ ದಲಿತನೊಬ್ಬನನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ' ಎಂದು ಬಿಹಾರದ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಕುಮಾರ್ ರಾಮ್ ಅಭಿಪ್ರಾಯಪಟ್ಟರು

ಮುಂಬೈನಲ್ಲಿ ಎನ್‌ಸಿಪಿ (ಶರದ್ ಪವಾರ್ ಬಣ) ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಪ್ರತಿಭಟನೆ ನಡೆಸಿವೆ.ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಜಗನ್ ಮೋಹನ್ ರೆಡ್ಡಿ ಘಟನೆಯನ್ನು ಖಂಡಿಸಿದ್ದಾರೆ.





ಸ್ವಾವಲಂಬನೆಯಿಂದ ಸ್ವಾತಂತ್ರ್ಯ

# ಸಬಲೀಕರಣದಿಂದ ಸಮಾನತೆ

## ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ

ಸಮಾನ ನ್ಯಾಯ – ಘನತೆಯ ಬದುಕಿಗಾಗಿ



### ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆಗೆ ಚಾಲನೆ

- ಸೆಪ್ಟೆಂಬರ್ 15 ರಿಂದ 45 ಕೆಲಸದ ದಿನಗಳ ಅವಧಿಯಲ್ಲಿ ಸಮೀಕ್ಷಾ ಕಾರ್ಯ
- ರಾಜ್ಯದ ಎಲ್ಲಾ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳು ಹಾಗೂ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಮೀಕ್ಷೆ
- "KARMANI WEB APPLICATION" ಮೂಲಕ ಆನ್ ಲೈನ್ ಸಮೀಕ್ಷೆ
- ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರ ಮೂಲಕವೇ ಸಮೀಕ್ಷೆ ಕಾರ್ಯ ನಡೆಸುವ ವಿನೂತನ ಹೆಜ್ಜೆ

## ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ

ಪುನರ್ವಸತಿ, ಪುನರ್ ಜೀವನದ ಆಶಯದೊಂದಿಗೆ



### ದೇವದಾಸಿ ವೃತ್ತಿಯಿಂದ ಹೊರಬಂದ ಮಹಿಳೆಯರ ಸ್ಥಿತಿಗತಿಗಳ ವಸ್ತುನಿಷ್ಠ ಮಾಹಿತಿಗಾಗಿ ಮರುಸಮೀಕ್ಷಾ ಕಾರ್ಯ

- ಸೆಪ್ಟಂಬರ್ 15 ರಿಂದ ಏಕಕಾಲಕ್ಕೆ ರಾಜ್ಯದ 15 ಜಿಲ್ಲೆಗಳಲ್ಲಿ ಮರು ಸಮೀಕ್ಷೆ
- ಸೇವಾಸಿಂಧು ಪೋರ್ಟಲ್ ಮೂಲಕ ಸಮೀಕ್ಷೆಗಾಗಿ "WEB APPLICATION" ಬಳಕೆ
- ನಿಗದಿತ 15 ಜಿಲ್ಲೆಗಳ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಸಮೀಕ್ಷೆ
- ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಕಲಬುರ್ಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮಾಜಿ ದೇವದಾಸಿ ಮಹಿಳೆಯರ ದತ್ತಾಂಶ ಸಂಗ್ರಹ

**ಈ ಮೇಲ್ಕಂಡ ಎರಡೂ ಸಮೀಕ್ಷೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು**
**1800 599 2025 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ**

ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿದ ಎಲ್ಲಾ ಅವಕಾಶ ವಂಚಿತ ಸಮುದಾಯಗಳನ್ನು ಗುರುತಿಸಿ, ಅವರ ಘನತೆಯ ಬದುಕಿನ ಕನಸಿಗೆ ನೆರವಾಗುವುದು ನಮ್ಮ ಸರ್ಕಾರದ ಸಂಕಲ್ಪವಾಗಿದೆ.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

Scanned with OKEN Scanner

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**